
# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ

ಪಾಕಿಸ್ತಾನದಲ್ಲಿ ಹಿಂದು ಜನಸಂಖ್ಯೆ




ಸಂಪುಟ : 36 ಸಂಚಿಕೆ : 23 ಮನ್ಮಥ–ಮಿಥುನ ಕಲಿಯುಗಾಬ್ದ 5117 15–7–2015 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬ ಪುರಂದರದಾಸರ ಮಾತು ಗುರುವಿನ ಮಹತ್ತ್ವವನ್ನು ಸಾರಿ ಹೇಳುತ್ತದೆ. ಅನೇಕ ಜನ್ಮಗಳಲ್ಲಿ ಗಳಿಸಿದ ಪುಣ್ಯದಿಂದ ಆತ್ಮವೊಂದು ಮನುಷ್ಯ ಜನ್ಮ ಪಡೆಯುತ್ತದೆ ಮತ್ತು ಮೋಕ್ಷ ಸಾಧನೆಯೇ ಮನುಷ್ಯ ಜನ್ಮದ ಗುರಿ ಎನ್ನುವುದು ಹಿಂದು ಧರ್ಮದ ಕಲ್ಪನೆ. ಜೀವನದ ಗುರಿ ತಲುಪುವ ದಾರಿ ತೋರಿಸುವವನೇ ಗುರು. ಆದ್ದರಿಂದ ಗುರುವಿಗೆ ನಮ್ಮಲ್ಲಿ ಅಷ್ಟೊಂದು ಮಹತ್ತ್ವ.

ಭಾರತದಲ್ಲಿ ಇಡೀ ಸಮಾಜಕ್ಕೆ ದಾರಿ ತೋರಿದ ಗುರುಗಳು ಅದೆಷ್ಟೋ. ಜ್ಞಾನದ ಆಗರವಾದ ವೇದಗಳನ್ನು ವಿಂಗಡಿಸಿ ಉಪಕರಿಸಿದ್ದರಿಂದ ವ್ಯಾಸ ಮಹರ್ಷಿಗಳಿಗೆ ವೇದವ್ಯಾಸ ಎಂಬ ಹೆಸರು ಬಂತು. ಅದಲ್ಲದೇ, ಮಹಾಭಾರತ, ಪುರಾಣಗಳೂ ವೇದವ್ಯಾಸರ ಕೊಡುಗೆಗಳೇ. ಅವರು ಇಡೀ ಸಮಾಜಕ್ಕೆ ಗುರುಸ್ವರೂಪಿಯಾಗಿದ್ದಾರೆ. ಆದ್ದರಿಂಲೇ, ಅವರ ಜಯಂತಿಯ ದಿನವಾದ ಆಷಾಢ ಪೂರ್ಣಿಮೆ (ವ್ಯಾಸ ಪೂರ್ಣಿಮೆ)ಯನ್ನು ಗುರು ಪೂರ್ಣಿಮೆಯೆಂದು ದೇಶಾದ್ಯಂತ ಆಚರಿಸಲಾಗುತ್ತದೆ. ಪ್ರಾಚೀನ ಭಾರತದಲ್ಲಿ ಗುರುಕುಲಗಳಲ್ಲಿ ಕಲಿಯುತ್ತಿದ್ದ ಶಿಷ್ಯರೆಲ್ಲ ಗುರುಪೂರ್ಣಿಮೆಯ ದಿನದಂದು ತಮ್ಮ ಗುರುಗಳನ್ನು ಪೂಜಿಸಿ, ಗುರುದಕ್ಷಿಣೆಯನ್ನು ಸಮರ್ಪಿಸುವ ಪದ್ಧತಿಯಿತ್ತು. ಈಗಲೂ, ಗುರು–ಶಿಷ್ಯ ಪರಂಪರೆಯನ್ನು ಉಳಿಸಿಕೊಂಡು ಬಂದಿರುವ ಕೆಲವು ಗುರುಕುಲಗಳಲ್ಲಿ ಗುರುಪೂರ್ಣಿಮೆಯನ್ನು ಬಹಳ ಶ್ರದ್ಧೆಯಿಂದ ಆಚರಿಸಲಾಗುತ್ತದೆ.

ಸಮರ್ಥ ಗುರುವೊಬ್ಬನಿದ್ದರೆ ವ್ಯಕ್ತಿಯೊಬ್ಬ ಎಂತಹ ಸಾಧನೆಯನ್ನು ಬೇಕಾದರೂ ಮಾಡಬಹುದೆನ್ನುವುದಕ್ಕೆ ನಮ್ಮ ಇತಿಹಾಸದಲ್ಲಿ ಅನೇಕ ಉದಾಹರಣೆಗಳಿವೆ.

- ವಿದ್ಯಾರಣ್ಯರಿಂದಾಗಿ ಹಕ್ಕ–ಬುಕ್ಕರು ಒಂದು ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಮೂರು ಶತಮಾನಗಳ ಕಾಲ ದೇಶ ಪರಕೀಯರ ಆಕ್ರಮಣವನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಾಯಿತು. ಮುಸ್ಲಿಮರ ದುರಾಡಳಿತದಿಂದ ಕಂಗೆಟ್ಟಿದ್ದ ಹಿಂದುಗಳಿಗೆ ಆಶ್ರಯ ದೊರಕಿತು.
- ಸಮರ್ಥ ರಾಮದಾಸರಿಂದ ಶಿವಾಜಿಯಂತಹ ಒಬ್ಬ ಚಕ್ರವರ್ತಿ ತಯಾರಾದ. ಹಿಂದು ಸಮಾಜದ ರಕ್ಷಣೆಗೆ ಟೊಂಕ ಕಟ್ಟಿ ನಿಂತ. ಶಿವಾಜಿಯ ದೃಷ್ಟಿ ಕೇವಲ ಮರಾಠ ಸಾಮ್ರಾಜ್ಯ ಕಟ್ಟುವುದಾಗಿರಲಿಲ್ಲ, ಒಂದು ಪ್ರಬಲ ಹಿಂದು ಸಾಮ್ರಾಜ್ಯ ಸ್ಥಾಪನೆ ಮಾಡುವುದಾಗಿತ್ತು. ಶಿವಾಜಿಯ ಈ ಕೆಲಸದಿಂದಾಗಿ ಇಡೀ ಭಾರತದ ಜನಮಾನಸದಲ್ಲಿ ಆತ್ಮವಿಶ್ವಾಸ ಚಿಗುರಿತು. ಮುಂದೆ ಅನೇಕ ಸ್ವಾಭಿಮಾನಿ ಹಿಂದು ರಾಜರು ಅಲ್ಲಲ್ಲಿ ಬಲಿಷ್ಠ ಹಿಂದು ಸಾಮ್ರಾಜ್ಯವನ್ನು ಸ್ಥಾಪನೆ ಮಾಡುವುದಕ್ಕೆ ಇದು ಕಾರಣವಾಯಿತು.
- ರಾಮಕೃಷ್ಣ ಪರಮಹಂಸರಿಂದ ಒಬ್ಬ ವಿವೇಕಾನಂದರು ತಯಾರಾದರು. ಪಶ್ಚಿಮದ ದೇಶಗಳಲ್ಲಿ ಹಿಂದು ಧರ್ಮದ ಬಗ್ಗೆ ಅಜ್ಞಾನವಿದ್ದ ಕಾಲದಲ್ಲಿ, ಭಾರತವೆಂದರೆ ಹಾವಾಡಿಗರ, ಭಿಕ್ಷುಕರ ದೇಶ ಎಂಬ ಭ್ರಮೆಯಿದ್ದ ಕಾಲದಲ್ಲಿ ಹಿಂದು ಧರ್ಮವೆಂದರೇನೆಂಬುದನ್ನು ಅವರಿಗೆ ತಿಳಿಯಪಡಿಸಿದ್ದು ಇದೇ ವಿವೇಕಾನಂದರು. ಅಷ್ಟೇ ಅಲ್ಲದೇ, ಭಾರತದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಲು ಅನೇಕರಿಗೆ ಪ್ರೇರಣೆ ಕೊಟ್ಟವರು ಅವರು. ಸಮಾಜಸೇವೆ ಮಾಡಲು, ದೇಶಕ್ಕಾಗಿ ಬದುಕಲು–ತ್ಯಾಗ ಮಾಡಲು ಇಂದಿಗೂ ಲಕ್ಷಾಂತರ ಜನರಿಗೆ ಪ್ರೇರಣೆ ನೀಡುತ್ತಿವೆ ಅವರ ಮಾತುಗಳು.




## ವಿಶ್ವಗುರು ಭಾರತ

ವೈಯಕ್ತಿಕವಾಗಿ ಒಬ್ಬೊಬ್ಬರಿಗೆ ಒಬ್ಬೊಬ್ಬ ಗುರು ಇರಬಹುದು. ಅವರು ಬೇರೆ ಬೇರೆ ವಿಷಯಗಳಲ್ಲಿ ನಮ್ಮ ಪರಿಸ್ಥಿತಿ, ಮನಃಸ್ಥಿತಿಗೆ ಸರಿಹೊಂದಬಹುದಾದ ಮಾರ್ಗದರ್ಶನವನ್ನು ನಮಗೆ ನೀಡುತ್ತಿರಬಹುದು. ಆದರೂ, ಧರ್ಮವಿಲ್ಲದೇ ಯಾವುದೂ ಇಲ್ಲ. ಎಲ್ಲ ಗುರುಗಳ ಮಾರ್ಗದರ್ಶನವೂ ಧರ್ಮದ ಆಧಾರದ ಮೇಲೆಯೇ ಇರುವಂತಹುದು. ಧರ್ಮವೆನ್ನುವುದು ಸದೃಢ ಸಮಾಜದ ಆಧಾರಸ್ತಂಭವಿದ್ದಂತೆ. ಧರ್ಮವಿಲ್ಲದಿದ್ದಲ್ಲಿ ಅವ್ಯವಸ್ಥೆ, ಅಸ್ಥಿರತೆ, ಅಶಾಂತಿ ಕಟ್ಟಿಟ್ಟ ಬುತ್ತಿ. ಒಬ್ಬ ವ್ಯಕ್ತಿಯ ಜೀವನ ಹೇಗಿರಬೇಕು, ಸಮಾಜ ಜೀವನ ಹೇಗಿರಬೇಕು, ಪ್ರಕೃತಿಯೊಂದಿಗೆ ಮನುಷ್ಯನ ಸಂಬಂಧ ಹೇಗಿರಬೇಕು ಮೊದಲಾದ ಎಲ್ಲ ವಿಷಯಗಳನ್ನೂ ನಮ್ಮ ದೇಶದಲ್ಲಿ ಆಗಿಹೋದ ಋಷಿಮುನಿಗಳೂ, ಸಾಧುಸಂತರೂ ಹೇಳಿದ್ದಾರೆ. ಹಾಗಾಗಿ ಸ್ವಾಸ್ಥ್ಯಪೂರ್ಣ ಜೀವನಕ್ಕೆ ಬೇಕಾದ ಜ್ಞಾನಕ್ಕೆ ನಮ್ಮಲ್ಲೇನೂ ಕೊರತೆಯಿಲ್ಲ. ಕೇವಲ ಸಮಾಜವಿಜ್ಞಾನವಷ್ಟೇ ಅಲ್ಲದೇ, ಭೌತಿಕ ವಿಜ್ಞಾನದಲ್ಲಿಯೂ ಪ್ರಾಚೀನ ಭಾರತದ ಸಾಧನೆ ಅಪಾರ. ಭಾರತದಲ್ಲಿದ್ದ ಈ ಜ್ಞಾನಸಂಪತ್ತಿನಿಂದಾಗಿಯೇ ಒಂದು ಕಾಲದಲ್ಲಿ ಭಾರತ ವಿಶ್ವದ ಜ್ಞಾನಕೇಂದ್ರವಾಗಿತ್ತು, ವಿಶ್ವಗುರುವಾಗಿತ್ತು. ವಿಶ್ವದ ಅನೇಕ ದೇಶಗಳಿಂದ ಉನ್ನತ ಅಧ್ಯಯನಕ್ಕಾಗಿ ಭಾರತಕ್ಕೆ ಬರುತ್ತಿದ್ದರು. ನಲಂದಾ, ತಕ್ಷಶಿಲಾ ಮೊದಲಾದ ಅನೇಕ ವಿಶ್ವವಿದ್ಯಾಲಯಗಳು ಪ್ರಪಂಚದೆಲ್ಲೆಡೆಯಿಂದ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದ್ದವು. ಇಂದಿಗೂ ಭಾರತದ ಆಧ್ಯಾತ್ಮಿಕ ಶಕ್ತಿ ವಿಶ್ವವನ್ನು ತನ್ನತ್ತ ಸೆಳೆಯುತ್ತಿದೆ. ಈಗಲೂ, ಮತ್ತೆ ವಿಶ್ವಗುರುವಾಗುವ ಸಾಮರ್ಥ್ಯ ಭಾರತಕ್ಕಿದೆ.

## ಸಮಾಜದ ಋಣ

ಮನುಷ್ಯನ ಜೀವನದ ಮೇಲೆ ಸುತ್ತಲಿನ ಸಮಾಜದ, ತನ್ನ ಕುಟುಂಬದ ಹಿರಿಯರ ಪ್ರಭಾವ ಇದ್ದೇ ಇರುತ್ತದೆ. ಇಂದು ನಾವು ನಾವಾಗಿರಲು, ನಮ್ಮಲ್ಲಿ ಒಳ್ಳೆಯತನವಿರಲು ನಮ್ಮ ಸುತ್ತಲಿನ ಸಮಾಜ, ಗುರುಹಿರಿಯರೇ ಕಾರಣ. ಪ್ರತಿಯೊಬ್ಬ ವ್ಯಕ್ತಿಯ ಮೇಲೂ ಐದು ವಿಧದ ಋಣಗಳಿರುತ್ತವೆ. ಅವೆಂದರೆ:

- ದೇವ ಋಣ
- ಪಿತೃ ಋಣ
- ಋಷಿ ಋಣ
- ಭೂತ ಋಣ
- ಮನುಷ್ಯ ಋಣ

ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜೀವನದಲ್ಲಿ ಈ ಐದು ಋಣಗಳನ್ನು ತೀರಿಸಬೇಕಾದ್ದು ಕರ್ತವ್ಯ. ಜಪತಪ, ಪೂಜೆಗಳಿಂದ ದೇವ ಋಣವನ್ನು, ತಂದೆ ತಾಯಿಯರ ಸೇವೆಯ ಮೂಲಕ, ಮಕ್ಕಳನ್ನು ಪಡೆದು ವಂಶಾಭಿವೃದ್ಧಿ ಮಾಡುವ ಮೂಲಕ ಪಿತೃ ಋಣವನ್ನೂ, ತಾನು ಜ್ಞಾನಾರ್ಜನೆ ಮಾಡಿ ಬೇರೆಯವರಿಗೂ ಕಲಿಸುವ ಮೂಲಕ ಋಷಿ ಋಣವನ್ನೂ ತೀರಿಸುವುದು ಸಾಧ್ಯ. ಹಾಗೆಯೇ ಪ್ರಕೃತಿಯಿಂದ ನಾವು ಪಡೆಯುವ ಗಾಳಿ, ಬೆಳಕು, ನೀರು, ಆಹಾರ, ಪ್ರಾಣಿಪಕ್ಷಿಗಳಿಂದ ನಾವು ಪಡೆಯುವ ಉಪಕಾರಗಳ ಋಣವೇ ಭೂತ ಋಣ. ಪ್ರಾಣಿ ಪಕ್ಷಿಗಳನ್ನು ಸಾಕುವ ಮೂಲಕ, ಅವುಗಳಿಗೆ ದಯೆ ತೋರುವ ಮೂಲಕ, ಪ್ರಕೃತಿಗೆ ಹೊರೆಯಾಗದಂತೆ ಬದುಕುವುದು ಭೂತ ಋಣವನ್ನು ತೀರಿಸಲು ಇರುವ ಮಾರ್ಗ. ನಮ್ಮ ಸುತ್ತಮುತ್ತಲಿನ ಸಮಾಜದಿಂದ ನಾವು ಅನೇಕ ಪ್ರಯೋಜನಗಳನ್ನು ಪಡೆಯುತ್ತಲೇ ಇರುತ್ತೇವೆ. ರೈತರು, ವ್ಯಾಪಾರಿಗಳು, ಕಾರ್ಮಿಕರು ಮೊದಲಾದವರ ಸಹಕಾರದಿಂದ ನಮ್ಮ ಜೀವನ ನಡೆಯುತ್ತಿರುತ್ತದೆ. ಇವರೆಲ್ಲರ ಋಣವೇ ಮನುಷ್ಯ ಋಣ. ಇನ್ನೊಬ್ಬರಿಗೆ ಉಪಕಾರ ಮಾಡುವುದು, ಒಳ್ಳೆಯ ಕೆಲಸ ಕಾರ್ಯಗಳಿಗೆ ಸಹಾಯ ಮಾಡುವುದು, ದೇಶ–ಸಮಾಜ ಕಾರ್ಯದಲ್ಲಿ ಕೈಜೋಡಿಸುವುದರಿಂದ ಮನುಷ್ಯ ಋಣ ತೀರಿಸಲು ಸಾಧ್ಯ.

## ಸಮರ್ಪಣೆ

ಸಮಾಜದಿಂದ, ಪ್ರಕೃತಿಯಿಂದ ನಾವೆಲ್ಲರೂ ಉಪಕೃತರೇ, ಬಹಳಷ್ಟನ್ನು ಕಲಿತವರೇ. ನಮ್ಮ ದೇಶ, ಧರ್ಮ ಮತ್ತು ಸಮಾಜದಿಂದಾಗಿಯೇ ನಾವು ಬದುಕನ್ನು ಕಟ್ಟಿಕೊಂಡಿರುವುದರಿಂದ ಅವೆಲ್ಲವೂ ನಮಗೆಲ್ಲರಿಗೂ ಒಂದು ರೀತಿಯಲ್ಲಿ ಗುರುವೇ ಸರಿ. ಆದ್ದರಿಂದಲೇ, ಪ್ರತಿ ವರ್ಷದ ಗುರುಪೂಜೆಯಲ್ಲಿ ನಾವೆಲ್ಲರೂ ನಮ್ಮ ದೇಶವನ್ನು, ಸಮಾಜವನ್ನೂ ಪೂಜಿಸಬೇಕಾದದ್ದು ನಮ್ಮ ಕರ್ತವ್ಯ. ಅದು, ಯಾಂತ್ರಿಕ ಪೂಜೆಯಲ್ಲ. ಅಲ್ಲಿ ಮಂತ್ರ ತಂತ್ರಗಳಿರಬೇಕಿಲ್ಲ. ಶ್ರದ್ಧೆಯಿದ್ದರೆ ಸಾಕು, ಭಕ್ತಿ–ಭಾವವಿದ್ದರೆ ಸಾಕು. ನಮ್ಮನ್ನು ಬೆಳೆಸಿದ್ದಕ್ಕೆ, ನಮಗೆ ಕಲಿಸಿದ್ದಕ್ಕೆ ನಮ್ಮ ಮಾತೃಭೂಮಿಯನ್ನೂ, ನಮ್ಮ ಧರ್ಮವನ್ನೂ ಸ್ಮರಿಸುವ ಕ್ಷಣ ಅದು. ನಮ್ಮ ದೇಶಕ್ಕಾಗಿ, ಧರ್ಮಕ್ಕಾಗಿ ನಮ್ಮ ತನು–ಮನ–ಧನವನ್ನು ಸಮರ್ಪಣೆ ಮಾಡುವ ಭಾವನಾಪೂರ್ಣ ಘಳಿಗೆ ಅದು.

ಸಮಾಜಕ್ಕಾಗಿ ನಮ್ಮ ಸಮಯವನ್ನು ಸಮರ್ಪಣೆ ಮಾಡುವವರು ಕೆಲವರಾದರೆ, ಧನ ಸಮರ್ಪಣೆ ಮಾಡುವವರು ಕೆಲವರು. ತಮ್ಮ ಬುದ್ಧಿಶಕ್ತಿಯನ್ನೂ, ತಮ್ಮತಮ್ಮಲ್ಲಿನ ವಿಶೇಷ ಕೌಶಲಗಳನ್ನೂ, ಕಲೆಯನ್ನೂ ಸಮರ್ಪಣೆ ಮಾಡುವವರು ಕೆಲವರು. ಅಷ್ಟೇಕೆ, ತಮ್ಮ ಜೀವನವನ್ನೇ ಸಮಾಜಕ್ಕಾಗಿ ಸಮರ್ಪಿಸಿ, ಹಗಲೂ ರಾತ್ರಿ ಸಮಾಜಕ್ಕಾಗಿ, ದೇಶಕ್ಕಾಗಿ ಶಕ್ತಿಮೀರಿ ದುಡಿಯುವವರು ಮತ್ತೆ ಕೆಲವರು. ಇಂತಹ ಲಕ್ಷಾಂತರ ಜನರು ತಮ್ಮ ತಮ್ಮ ಶಕ್ತಿಗನುಗುಣವಾಗಿ ತಮ್ಮದೆಲ್ಲವನ್ನೂ, ಪ್ರಾಣವನ್ನೂ ಈ ಮಾತೃಭೂಮಿಗಾಗಿ ಸಮರ್ಪಣೆ ಮಾಡಿದ್ದರಿಂದಲೇ ಭಾರತ ತನ್ನ ದಾಸ್ಯದ ಸಂಕೋಲೆಗಳನ್ನು ಕಳಚಿಕೊಳ್ಳಲು ಸಾಧ್ಯವಾಯಿತು. ಆ ಪರಂಪರೆ ಇಂದಿಗೂ ಮುಂದುವರಿದಿದೆ. ಭಾರತಮಾತೆಯ ಸುಪುತ್ರ–ಪುತ್ರಿಯರು ತಾಯಿಯ ಸೇವೆಗಾಗಿ ತಮ್ಮನ್ನು ತಾವು ಸಮರ್ಪಿಸಿಕೊಳ್ಳುತ್ತಿರುವುದರಿಂದಲೇ ಪ್ರಪಂಚದ ಭೂಪಟದಲ್ಲಿ ಭಾರತ ಕಳೆದುಹೋಗಿಲ್ಲ, ಭಾರತವಾಗಿಯೇ ಉಳಿದಿದೆ!

ಇಂತಹ ಸಮರ್ಪಣೆಯ ಭಾವ ಹೆಚ್ಚು ಹೆಚ್ಚು ಜನರಲ್ಲಿ ಬಂದಾಗ, 'ಈ ಸಮಾಜ ನನ್ನದು, ಈ ದೇಶ ನನ್ನದು' ಎಂಬ ಭಾವನೆ ಬಂದಾಗ ನಮ್ಮ ದೇಶ ಮತ್ತೆ ಜಗದ್ಗುರುವಾಗಿ ತಲೆ ಎತ್ತಿ ನಿಲ್ಲುವುದರಲ್ಲಿ ಅನುಮಾನವಿಲ್ಲ. ಅಂತಹ ಕಾಲ ಇಂದು ಸನ್ನಿಹಿತವಾಗುತ್ತಿದೆ. ನನ್ನ ದೇಶಕ್ಕಾಗಿ ನಾನೇನು ಕೊಡಬಲ್ಲೆ ಎಂದು ಪ್ರಶ್ನೆ ಮಾಡಿಕೊಳ್ಳುವವರ ಸಂಖ್ಯೆ ಇಂದು ಹೆಚ್ಚುತ್ತಿದೆ. ಸಮಾಜಸೇವಾ ಕಾರ್ಯಗಳು ಹೆಚ್ಚುತ್ತಿವೆ. ಸಮಾಜಕ್ಕಾಗಿ ಕೆಲಸ ಮಾಡುವ ಸಂಘಟನೆಗಳೊಂದಿಗೆ ಸೇರಿಕೊಳ್ಳವವರ ಸಂಖ್ಯೆ ಹೆಚ್ಚುತ್ತಿದೆ. ಭಾರತ ಬಡದೇಶ ಎಂದು ಪಠ್ಯಪುಸ್ತಕಗಳಲ್ಲಿ ಓದಿದ್ದು ಸಾಕು, ಇದನ್ನು ಬದಲಿಸೋಣ ಎಂದು ಪಣತೊಟ್ಟ ಯುವಜನರ ಗುಂಪು ಹೆಚ್ಚುತ್ತಿದೆ. ಹಿಂದು ಎನ್ನಲು ನಾಚಿಕೊಳ್ಳುತ್ತಿದ್ದ ಕಾಲ ಮರೆಯಾಗಿ, ಹಿಂದು ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಕಾಲ ಇಂದು ಬಂದಿದೆ.

ಹೌದು, ಭಾರತಮಾತೆಯನ್ನು ಮತ್ತೆ ವಿಶ್ವಗುರುವಿನ ಸ್ಥಾನದಲ್ಲಿ ಪ್ರತಿಷ್ಠಾಪಿಸಲು ಕ್ಷಣಗಣನೆ ಆರಂಭವಾಗಿದೆ. ನಾವು ಈ ಮಹತ್ಕಾರ್ಯದಲ್ಲಿ ಹೇಗೆ ಕೈಜೋಡಿಸಬಲ್ಲೆವು? ನಾವು ಏನನ್ನು ಕೊಡಬಲ್ಲೆವು ಎಂಬುದನ್ನು ಮಾತ್ರ ನಾವೇ ನಿರ್ಧರಿಸಬೇಕು. ಗುರುಪೂರ್ಣಿಮೆಯ ಈ ಶುಭ ಸಂದರ್ಭದಲ್ಲಿ ಅಂತಹ ಸಮರ್ಪಣೆಯ ಸಂಕಲ್ಪ ನಮ್ಮದಾಗಲಿ.

## ಸಮರ್ಥ ಭಾರತ
### ಒಂದು ಗುರಿ - ಹಲವು ದಾರಿ

ಕಲೆ ಎಲ್ಲವನ್ನೂ ಮರೆಯಿಸಬಲ್ಲದು. ನೋವು, ದುಃಖ, ದ್ವೇಷಾಸೂಯೆಗಳು, ಉಚ್ಚ–ನೀಚ ಭಾವ ಕೊನೆಗೆ ತನ್ನನ್ನೂ ಮರೆಸಬಲ್ಲ ಸಾಮರ್ಥ್ಯ ಲಲಿತಕಲೆಗಳಿಗಿವೆ. ದೇಹಾಲಸ್ಯವಾದಾಗ ವಿಶ್ರಾಂತಿ, ನಾಲ್ಕಾರು ಜನ ಜೊತೆಗೂಡಿದಾಗ ವಿನೋದ, ಸೋತು ಬಸವಳಿದಾಗ ಆತ್ಮವಿಶ್ವಾಸವನ್ನು ನೀಡುತ್ತ ಮನಸ್ಸನ್ನು ಉಲ್ಲಸಿತಗೊಳಿಸಿ ಸದಾನಂದದೆಡೆಗೆ, ಮುಕ್ತಿಯೆಡೆಗೆ ನಮ್ಮನ್ನೊಯ್ಯುವ ಶಕ್ತಿ ಲಲಿತಕಲೆಗಳಿಗಿವೆ. ಯೋಗಿಗಳು ಸಾಧಿಸುವ ಸಮಾಧಿಯ ಸ್ಥಿತಿಗೆ ಕೊಂಡೊಯ್ಯಬಲ್ಲ ಸಾಧನಾಮಾರ್ಗವಾಗಬಲ್ಲದು. ಮಾನವರ ಹೃದಯಗಳನ್ನು ಮೀಟಿ ಸಮಾಜವನ್ನು ಒಗ್ಗೂಡಿಸುವ ಶಕ್ತಿ ಕಲೆಗಿದೆ. ಸಾಮಾನ್ಯ ಮಾನವನ ಹೃದಯವನ್ನು ತಟ್ಟಬಲ್ಲ ಸುಗಮ ಹಾಗೂ ರಂಜಕ ಆನಂದವು ಲಲಿತಕಲೆಗಳಿಂದ ಮಾತ್ರ ಸಿಗಲು ಸಾಧ್ಯ. ಸದಭಿರುಚಿಯ ಲಲಿತಕಲೆಗಳು ರಂಜನೆಯ ಜೊತೆಗೆ ಸಂಸ್ಕಾರವನ್ನೂ ನೀಡುವುದರ ಮೂಲಕ ಮಾನವನನ್ನು ಪಶುತ್ವದಿಂದ ದೈವತ್ವಕ್ಕೇರಿಸುತ್ತವೆ.

ಕಲಾಜಗತ್ತು ಯಾರನ್ನೂ ತಡೆದಿಲ್ಲ. ನಾಗರಿಕತೆಯ ವಿಕಾಸ ಕೇಂದ್ರಗಳಾದ ಮೆಟ್ರೋ ನಗರಗಳಿಂದ ದೂರದ ಗುಡ್ಡಗಾಡಿನ ಆದಿವಾಸಿಗಳವರೆಗೆ ವಿವಿಧ ರೀತಿಯ ಕಲಾಪ್ರಕಾರಗಳು ಬೆಳೆದಿವೆ. ಒಂದು ರಾಷ್ಟ್ರದ ಸಂಸ್ಕೃತಿಯನ್ನು ಪ್ರಭಾವಿಯಾಗಿ ಬಿಂಬಿಸುವ ಮಾಧ್ಯಮ ಕಲಾಪ್ರಕಾರವೇ ಆಗಿದೆ. ಆದ್ದರಿಂದ ಪ್ರತಿ ವ್ಯಕ್ತಿಯ ಹಾಗೂ ರಾಷ್ಟ್ರ ಜೀವನದಲ್ಲಿ ಕಲೆಗೆ ಒಂದು ಮಹತ್ವದ ಸ್ಥಾನವಿದೆ. ವ್ಯಕ್ತಿಯನ್ನು ಸಮಾಜದೊಂದಿಗೆ, ಸಮಾಜವನ್ನು ರಾಷ್ಟ್ರದೊಂದಿಗೆ ಬೆಸೆಯಬಲ್ಲ ಅಲೌಕಿಕ ಶಕ್ತಿ ಭಾರತೀಯ ಕಲಾಪ್ರಕಾರಗಳಿಗಿವೆ.

# ಲಲಿತಕಲೆಗಳ ಮೂಲಕ ಲೋಕಸಂಸ್ಕಾರ

## ಚಟುವಟಿಕೆಯ ಬಗ್ಗೆ

संस्कार भारती

ಈ ನಿಟ್ಟಿನಲ್ಲಿ ಕಲೆಯ ಮೂಲಕ ಲೋಕಸಂಸ್ಕಾರವನ್ನು ನೀಡುವ ತನ್ಮೂಲಕ ರಾಷ್ಟ್ರಾರಾಧನೆ ಮಾಡುವ ಕಾರ್ಯದಲ್ಲಿ 'ಸಂಸ್ಕಾರ ಭಾರತಿ' ತೊಡಗಿಸಿಕೊಂಡಿದೆ. ಕಲೆ ವಿಲಾಸಕ್ಕಾಗಿ ಅಲ್ಲ, ಆತ್ಮ ವಿಕಾಸಕ್ಕಾಗಿ ಎನ್ನುವುದು ಸಂಸ್ಕಾರ ಭಾರತಿಯ ದೃಢವಾಗಿ ನಂಬಿಕೆ.

ಕಲೆಯ ಮೂಲಕ ಲೋಕಸಂಸ್ಕಾರ ನೀಡುವ ರಾಷ್ಟ್ರಕಾರ್ಯದಲ್ಲಿ ನಿರತವಾಗಿರುವ ಸಂಸ್ಕಾರ ಭಾರತಿಯು ಕಳೆದ ಕೆಲವು ದಶಕಗಳಿಂದ ಅನೇಕ ವಿಧದ ಚಟುವಟಿಕೆಗಳನ್ನು ನಡೆಸುತ್ತಿದೆ.

- ಕಲಾವಿದರು ಕಲಾರಸಿಕರನ್ನೊಳಗೊಂಡ ಸ್ಥಳೀಯ ಸಮಿತಿಗಳ ರಚನೆ. ಈ ಸಮಿತಿಗಳ ಆಶ್ರಯದಲ್ಲಿ ಕಲಾಗೋಷ್ಠಿಗಳು, ಸಂಸ್ಕಾರ ಶಿಬಿರಗಳು, ಕಲಾ ಉತ್ಸವಗಳನ್ನು ನಡೆಸುವುದು.
- ಲಲಿತಕಲೆಗಳಿಗೆ ಸಂಬಂಧಿಸಿದ ಚಿಂತನಾಗೋಷ್ಠಿ, ಮೆರವಣಿಗೆ ಹಾಗೂ ಪ್ರದರ್ಶನಗಳನ್ನು ಆಯೋಜಿಸುವುದು.
- ವಿವಿಧ ಕಲಾಪ್ರಕಾರಗಳಲ್ಲಿ ತರಬೇತಿ ನೀಡುವ ಕೇಂದ್ರಗಳನ್ನು ನಡೆಸುವುದು.
- ಸ್ಥಾನೀಯ ಮಟ್ಟದಿಂದ, ಪ್ರಾಂತ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಕಲಾಉತ್ಸವಗಳನ್ನು ನಡೆಸುವುದು.
- ಅಭ್ಯಾಸ ವರ್ಗ ಹಾಗೂ ಶಿಬಿರಗಳನ್ನು ನಡೆಸುವುದು. ಉದಾಹರಣೆಗೆ ಭೂ ಅಲಂಕರಣ (ರಂಗೋಲಿ) ಶಿಬಿರ, ಭಜನಾ ಶಿಬಿರ ಇತ್ಯಾದಿ.
- ಗ್ರಾಮೀಣ ಕಲೆಗಳನ್ನು ಉಳಿಸಿ ಪ್ರೋತ್ಸಾಹಿಸುವುದು.
- ಕೆಲವು ವಿಶೇಷ ಕಾರ್ಯಕ್ರಮಗಳನ್ನು ನಡೆಸುವುದು. ಉದಾಹರಣೆಗೆ ಶ್ರೀಕೃಷ್ಣಾಷ್ಟಮಿಯ ಸಂದರ್ಭದಲ್ಲಿ ಮಕ್ಕಳಿಗೆ ಕೃಷ್ಣನ ವೇಷ ತೊಡಿಸುವ ಸ್ಪರ್ಧೆ, ದೀಪಾವಳಿ ಮಿಲನ, ಕಾರ್ತಿಕೋತ್ಸವ, ಗುರುಪೂರ್ಣಿಮೆಯ ಸಂದರ್ಭದಲ್ಲಿ ಸ್ಥಳೀಯ ಕಲಾವಿದರನ್ನು ಗುರುತಿಸಿ ಗೌರವ ಸಮರ್ಪಣೆ ಮಾಡುವುದು ಇತ್ಯಾದಿ.
- ಹಾಗೆಯೇ ಪ್ರದರ್ಶನ ಕಲೆಗಳಲ್ಲಿ ಯುವ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ 'ರಂಗತೋರಣ' ಎನ್ನುವ ವಿಶಿಷ್ಟ ಕಾರ್ಯಕ್ರಮವನ್ನು ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ನಡೆಸುತ್ತಿದೆ.

## ನಾವೇನು ಮಾಡಬಹುದು?

- ಸಂಸ್ಕಾರ ಭಾರತಿಯ ಸದಸ್ಯತ್ವ ಪಡೆದು ಕಾರ್ಯಕರ್ತರಾಗಿ ಕೆಲಸಮಾಡುವುದು.
- ಸಮಾನ ಮನಸ್ಕ ಕಲಾಪ್ರೇಮಿಗಳನ್ನು ಜೋಡಿಸಿ ಸ್ಥಳೀಯ ಸಮಿತಿಗಳನ್ನು ರಚಿಸುವುದು. ಇಂತಹ ಸಮಿತಿಗಳಿಗೆ ಕಾರ್ಯಕರ್ತರನ್ನು ಜೋಡಿಸುವುದು.
- ಸ್ಥಳೀಯ ಕಲಾವಿದರನ್ನು ಗುರುತಿಸಿ ಸಂಪರ್ಕಿಸುವುದು, ಅವರನ್ನು ಸಂಸ್ಕಾರ ಭಾರತಿಯೊಂದಿಗೆ ಜೋಡಿಸುವುದು.
- ಕಲಾವಿದರ ಮಿಲನಗಳನ್ನು ನಡೆಸುವುದು.
- ಕಲಾಪೋಷಕರು, ಪ್ರಾಯೋಜಕರು, ಕಲಾಪ್ರೇಮಿಗಳು, ರಸಿಕರನ್ನು ಗುರುತಿಸಿ ಸಂಪರ್ಕಿಸುವುದು.
- ಕಾರ್ಯಕ್ರಮಗಳಿಗೆ ಅಗತ್ಯವಿರುವ ಸಂಪನ್ಮೂಲಗಳನ್ನು ಸಂಗ್ರಹಿಸುವುದು.
- ನಮ್ಮ ಪ್ರದೇಶದ ಪ್ರತಿಭಾವಂತ ಯುವಕಲಾವಿದರನ್ನು ಗುರುತಿಸಿ ಅವರಿಗೆ ಸೂಕ್ತ ವೇದಿಕೆಯನ್ನೊದಗಿಸಿ ಪ್ರೋತ್ಸಾಹಿಸುವುದು.
- ತರಬೇತಿ ಕೇಂದ್ರಗಳು, ಅಭ್ಯಾಸವರ್ಗಗಳನ್ನು ಆಯೋಜಿಸುವುದು.
- ಕಲಾವಿದರುಗಳ ಮಧ್ಯೆ ರಾಷ್ಟ್ರೀಯ ವಿಚಾರಗಳನ್ನು ಪ್ರಚಾರ ಮಾಡುವುದು. ಕಲಾವಿದರು ತಮ್ಮ ಕಲೆಗಳನ್ನು ಕೇವಲ ಮನರಂಜನೆಗಾಗಿ ಅಥವಾ ಹಣ ಗಳಿಸುವ ಸಲುವಾಗಿ ಪ್ರದರ್ಶಿಸದೇ ಸಮಾಜ ಸಂಸ್ಕಾರ, ಲೋಕಹಿತಕ್ಕಾಗಿ ಬಳಸುವಂತೆ ಪ್ರೇರೆಪಿಸುವುದು.
- ಸಾಮಾನ್ಯ ಜನರಿಗೆ ಸದಭಿರುಚಿಯ ಕಲೆಯನ್ನು ಆಸ್ವಾದಿಸುವ ಶಿಕ್ಷಣವನ್ನು ನೀಡುವುದು. ಹೆಚ್ಚು ಹೆಚ್ಚು ಜನರು ಭಾರತೀಯ ಕಲೆಗಳನ್ನು ಆಸ್ವಾದಿಸುವಂತೆ ಪ್ರೇರೇಪಿಸುವುದು.
- ಸದಭಿರುಚಿಯ ಕಲೆಗಳನ್ನು ಹಾಗೂ ಉದಯೋನ್ಮುಖ ಕಲಾವಿದರನ್ನು ವೃತ್ತಪತ್ರಿಕೆಗಳ ಲೇಖನ, ಅಂತರ್ಜಾಲ ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಪ್ರಚಾರ ಮಾಡುವುದು.
- ನಮ್ಮ ಪ್ರದೇಶದಲ್ಲಿ ಪ್ರಚಲಿತವಿರುವ ಸ್ಥಾನೀಯ/ಗ್ರಾಮೀಣ ಕಲಾಪ್ರಕಾರವನ್ನು ಗುರುತಿಸಿ ಪ್ರೋತ್ಸಾಹಿಸುವುದು.

### ಸಂಪರ್ಕ

**ಸಂಸ್ಕಾರ ಭಾರತಿ**
ಯಾದವ ಸ್ಮೃತಿ, ಶೇಶಾದ್ರಿಪುರಂ
ಬೆಂಗಳೂರು– 560010

ರಾಜ್ಯಾಧ್ಯಕ್ಷರು
**ಶ್ರೀ ಸುರೇಶ ರಾಜ್,** ಮಂಗಳೂರು
ದೂರವಾಣಿ: 98450 80968

ರಾಜ್ಯ ಪ್ರಧಾನ ಕಾರ್ಯದರ್ಶಿ
**ಶ್ರೀ ಅಶೋಕ್ ಕುಮಾರ್,** ಮೈಸೂರು
ದೂರವಾಣಿ: 98451 23504

ರಾಜ್ಯ ಸಂಘಟನಾ ಕಾರ್ಯದರ್ಶಿ
**ಶ್ರೀ ಶ್ರೀಪತಿ**
ದೂರವಾಣಿ: 99456 29991

**'ರಂಗಮನೆ'**
ತೇಕೂರು ರಾಮನಾಥ ಕಂಪೌಂಡ್
ಮೋಕಾ ರಸ್ತೆ, ಬಳ್ಳಾರಿ – 583103
ದೂರವಾಣಿ: 08392–255805, 9916009426

## ನೆಲದ ಮಾತು

# ಕಲ್ಲು ಭೂಮಿಗೆ ಕಳೆ ತಂದ ಕೃಷಿ

ದಶಕದ ಹಿಂದೆ ಸಂಪೂರ್ಣ ಕಲ್ಲಿನಿಂದ ತುಂಬಿದ್ದ 28 ಎಕರೆ ಜಮೀನಿನಲ್ಲೀಗ ಸಂಪೂರ್ಣ ಸಾವಯವದ ಫಲ ತೊನೆಯಾಡುತ್ತಿವೆ. ಇಂಥ ಜಮೀನಿನಲ್ಲಿ ಎಂದಾದರೂ ಹಸಿರಿನ ಕೊನರು ಸಾಧ್ಯವೇ ಎಂಬ ಪ್ರಶ್ನೆಗೆ ಉತ್ತರವಾಗಿ ಈ ಜಮೀನಿನಲ್ಲೀಗ ಏನುಂಟು, ಏನಿಲ್ಲ ಎಂಬಷ್ಟು ವೈವಿಧ್ಯ ಬೆಳೆಗಳು ಅನಾವರಣಗೊಂಡಿವೆ. ಎಲ್ಲಕ್ಕೂ ಮುಕುಟವಿಟ್ಟಂತೆ ಇದೀಗ ರೈತರ ತರಬೇತಿ ಕೇಂದ್ರವಾಗಿಯೂ ಪರಿಣಮಿಸಿದೆ!

ಇಂಥದ್ದೊಂದು 'ಮ್ಯಾಜಿಕ್' ಮಾಡಿರುವ ಕೃಷಿಕ ಎಂದರೆ ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆ ತಾಲ್ಲೂಕಿನ ಹಂಪಪುರ ಹೋಬಳಿಯ ಕ್ಯಾತನಹಳ್ಳಿಯ ಹೆಚ್.ಆರ್.ಮೂರ್ತಿ.

ಸಂಪೂರ್ಣ ಇಪ್ಪತ್ತೆಂಟು ಎಕರೆ ಜಮೀನಿನಲ್ಲಿ ಸಾವಯವದಲ್ಲಿಯೇ ಬಹು ಬಗೆಯ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಚಿಕ್ಕು, ತೆಂಗು, ಅಡಿಕೆ, ಕಾಳುಮೆಣಸಿನ ಬಳ್ಳಿ, ಜಾಯಿಕಾಯಿ, ಕಾಫಿ, ನಿಂಬೆ, ಶುಂಠಿ, ಹತ್ತಿ, ರಾಗಿ–ಹೀಗೆ ಇಲ್ಲಿ ಎಲ್ಲವೂ ಇದೆ. ಸಾಮಾನ್ಯ ಹಣ್ಣುಗಳಿಂದ ಹಿಡಿದು ಅಳಿವಿನಂಚಿನಲ್ಲಿರುವ ಹಣ್ಣುಗಳಾದ ಸ್ಟಾರ್ ಫ್ರೂಟ್, ಕಿತ್ತಳೆ, ಚಕ್ಕೋತ, ರಾಮಫಲ, ಸೀತಾಫಲ, ಹನುಮಾನ್‌ಫಲ, ಲಕೊಟೆ, ಲಿಚಿ, ಎಗ್‌ಫ್ರೂಟ್, ದಾಳಿಂಬೆ, ಬಿಳಿ ಸಪೋಟಾ, ಪುನರ್ಪುಳಿ, ನುಗ್ಗೆ, ವೆಲ್‌ವೆಟ್ ಪಲ್, ಬಟರ್‌ಫ್ರೂಟ್, ಬೀಜರಹಿತ/ಸಹಿತ ಜಂಬು ನೇರಳೆ, ಮಲಯನ್ ಆಪಲ್ (ಲಕೊಟೆ ಹಣ್ಣು), ಮಾವು, ಹಲಸು... ಹೀಗೆ ಎಲ್ಲವೂ ಇಲ್ಲಿವೆ.

ಪ್ರತಿವರ್ಷ ಬಗೆಬಗೆಯ ಕೃಷಿಯಿಂದ 30 ಲಕ್ಷಕ್ಕೂ ಅಧಿಕ ಲಾಭವನ್ನು ಪಡೆಯುತ್ತಿರುವ ಮೂರ್ತಿಯವರು ಕೃಷಿ ಭೂಮಿಗೆ ನೀರುಣಿಸುವ ವಿಧಾನವೇ ಭಿನ್ನ. ಒಂದು ಹನಿ ನೀರನ್ನು ಇವರು ವ್ಯರ್ಥಮಾಡುವುದಿಲ್ಲ. ಬೋರ್‌ಗಳಿಂದ ನೀರನ್ನು ಒಂದು ಟ್ಯಾಂಕಿಗೆ ಬೀಳುವಂತೆ ಮಾಡಿದ್ದಾರೆ. ಇಲ್ಲೂ ಕೃಷಿಗೆ ಪೂರಕವಾಗುವ ನಿಟ್ಟಿನಲ್ಲಿ ಸಿಮೆಂಟಿನ ಬದಲು 100X80 ಅಡಿಯ ಸುತ್ತಳತೆಯಲ್ಲಿ 18 ಅಡಿ ಆಳವಾಗಿ ಭೂಮಿಯನ್ನು ತೋಡಿ ಅದಕ್ಕೆ ಒಳಭಾಗದಿಂದ ಪ್ಲಾಸ್ಟಿಕ್ ಆಳವಡಿಸಿ 18 ಲಕ್ಷ ಲೀಟರ್ ನೀರು ಏಕಕಾಲದಲ್ಲಿ ಶೇಖರಿಸಲಾಗುವ ಟ್ಯಾಂಕ್‌ನ್ನು ನಿರ್ಮಿಸಿದ್ದಾರೆ. ಅಲ್ಲಿಂದ ನೀರನ್ನು ಯಂತ್ರದ ಮೂಲಕ ಶುದ್ಧೀಕರಣಗೊಳಿಸಿ ತೋಟಕ್ಕೆ ಪೈಪ್‌ನಲ್ಲಿ ಹನಿನೀರಾವರಿ ವಿಧಾನದ ಮೂಲಕ ನೀಡುತ್ತಿದ್ದಾರೆ.

ತೋಟದೆಲ್ಲೆಡೆ ಸುಲಭವಾಗಿ ಚಲಿಸಲು ರಸ್ತೆಯನ್ನು ಮಾಡಲಾಗಿದೆ. ಇದರಿಂದಾಗಿ ಸಾಗಾಟ ವ್ಯವಸ್ಥೆ ತುಂಬಾ ಸರಳ ಮತ್ತು ಸುಲಭವಾಗಿದೆ.

### ಸಂಪೂರ್ಣ ಸಾವಯವ

ಈ ಜಮೀನು ಎಂದಿಗೂ ರಾಸಾಯನಿಕದ ರುಚಿಯನ್ನು ಉಂಡಿಲ್ಲ. ಆರಂಭದ ನಾಲ್ಕು ವರ್ಷ ಜೀವಾಮೃತವನ್ನು ನೀಡಿದ್ದಾರೆ. ಈಗಲೂ ಕೊಟ್ಟಿಗೆ ಗೊಬ್ಬರ, ಕೋಳಿ ಹಿಕ್ಕೆ ಮುಂತಾದ ಸಾವಯವ ಗೊಬ್ಬರವನ್ನೇ ನೀಡುತ್ತಿದ್ದಾರೆ. ಸೋಗೆ, ಬಾಳೆದಿಂಡು, ಕೊಳೆತ ಹಣ್ಣುಗಳು, ಸಿಪ್ಪೆಯನ್ನು ತೋಟದಲ್ಲೇ ಬಿಡುತ್ತಾರೆ. ಅವು ಕೊಳೆತು ಗೊಬ್ಬರವಾಗುತ್ತವೆ. ತೋಟಕ್ಕೆ ಪ್ರತಿನಿತ್ಯ ಸೂರ್ಯನ ಕಿರಣಗಳು ಬೀಳುವಂತೆ ನೋಡಿಕೊಂಡಿದ್ದಾರೆ. ಭೂಮಿಯಲ್ಲಿ ತೇವ ಇರುವಂತೆ ನೋಡಿಕೊಂಡ ಪರಿಣಾಮ ಸೂಕ್ಷ್ಮಜೀವಿಗಳು ಇವರ ತೋಟದಲ್ಲಿ ಹೆಚ್ಚಾಗಿವೆ. ಪರಿಣಾಮ ಅಧಿಕ ಇಳುವರಿ ಪಡೆಯಲು ಸಾಧ್ಯವೆನ್ನುವುದು ಮೂರ್ತಿಯವರ ಅನುಭವದ ಮಾತು.

### ಇಳುವರಿ:

'ಸುಸ್ಥಿರ ಬದುಕಿಗಾಗಿ ಕೃಷಿ' ಎಂಬ ಧ್ಯೇಯ ವಾಕ್ಯದಡಿ ದುಡಿಯುತ್ತಿರುವ ಇವರು ಈ ಬಾರಿ ಎಂಟು ಕ್ವಿಂಟಾಲ್ ಕಾಳುಮೆಣಸನ್ನು ಪಡೆದಿದ್ದಾರೆ. ಉಳಿದಂತೆ ಬಾಳೆ, ಅಡಿಕೆ, ತೆಂಗು, ಹಣ್ಣು ಹಂಪಲುಗಳಿಂದ ನಿರೀಕ್ಷೆಗಿಂತ ದುಪ್ಪಟ್ಟು ಇಳುವರಿ ದೊರೆತಿದೆ. ಸಾವಯವದಲ್ಲಿ ಹತ್ತಿ ಬೆಳೆದು ಅದರಿಂದಲೂ ಲಾಭ ಗಳಿಸುತ್ತಿದ್ದಾರೆ.

ಅಪರೂಪದ, ವಿದೇಶಿ ಹಣ್ಣು ಹಂಪಲುಗಳ ಗಿಡಗಳನ್ನು ಬೇರೆ ಬೇರೆ ಕಡೆಗಳಿಂದ ತರುತ್ತಾರೆ. ಪ್ರಯತ್ನವಿದ್ದರೆ ಗುಡ್ಡವನ್ನು ಹಸಿರಾಗಿಸಬಹುದೆಂಬ ಮಾತಿಗೆ ಇವರ ಪ್ರಯತ್ನ ಉತ್ತಮ ಉದಾಹರಣೆ ಮೂರ್ತಿ ಅವರು. ಸಂಪರ್ಕಕ್ಕೆ (ರಾತ್ರಿ 8 ರಿಂದ 8.30): 9448050593

*ಕೃಪೆ: ಪ್ರಜಾವಾಣಿ*

# ಬಿಹಾರದ ಒಂದೇ ಗ್ರಾಮದಲ್ಲಿ ನೂರಾರು ಮಂದಿ ಐಐಟಿ ಪದವೀಧರರು

ಐಎಎಸ್, ಐಪಿಎಸ್, ಐಎಫ್‌ಎಸ್, ಐಐಟಿ ಪರೀಕ್ಷೆಗಳಿಗೆ ಹಾಜರಾಗುವುದೆಂದರೆ ಬಹುತೇಕ ವಿದ್ಯಾರ್ಥಿಗಳು ಹೌಹಾರುತ್ತಾರೆ. ಇದು ಅತೀ ಬುದ್ಧಿವಂತರಿಗೆ, ಶ್ರೀಮಂತರಿಗೆ, ದೊಡ್ಡ ನಗರ ಪ್ರದೇಶದಲ್ಲಿರುವವರಿಗೆ ಮಾತ್ರ ಸಾಧ್ಯ. ನಮ್ಮಂತಹ ಬಡವರಿಗಲ್ಲ ಎಂಬುದು ಅನೇಕರ ಅಳಲು. ಆದರೆ ಬಿಹಾರದ ಗಯಾ ಸಮೀಪದ ಪತ್ವಾಟೋಲಿ ಎಂಬ ಕುಗ್ರಾಮದ ವಿದ್ಯಾರ್ಥಿಗಳು ಈ ಮಾತನ್ನು ಸುಳ್ಳಾಗಿಸಿದ್ದಾರೆ.

ಪತ್ವಾಟೋಲಿ ಗ್ರಾಮದಲ್ಲಿ ಈ ವರ್ಷ ಐಐಟಿ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ) ಪರೀಕ್ಷೆಗೆ ಹಾಜರಾಗಿ, ಉತ್ತೀರ್ಣರಾದವರ ಸಂಖ್ಯೆ ಬರೋಬ್ಬರಿ 18. ಪತ್ವಾಟೋಲಿ ಗ್ರಾಮ ಒಂದು ರೀತಿಯಲ್ಲಿ ಐಐಟಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಪರಂಪರೆಗೆ ಸಾಕ್ಷಿಯಾಗಿ ನಿಂತಿದೆ. ಇದೇ ಮೊದಲನೇ ಬಾರಿಗೆ ದೀಪಾಕುಮಾರಿ ಎಂಬ ವಿದ್ಯಾರ್ಥಿನಿ ಆ ಗ್ರಾಮದಿಂದ ಐಐಟಿ ಪರೀಕ್ಷೆಗೆ ಬರೆದು ಯಶಸ್ವಿಯಾಗಿದ್ದಾಳೆ. ಈ ಬಾರಿ ಐಐಟಿ ಪರೀಕ್ಷೆಯಲ್ಲಿ 62ನೇ ರ್‍ಯಾಂಕ್ ಪಡೆದ ರಾಹುಲ್ ಕುಮಾರ್ ಇತಿಹಾಸವನ್ನೇ ಸೃಷ್ಟಿಸಿದ್ದಾನೆ. ವಿಕಲಚೇತನನಾಗಿರುವ ರಾಹುಲ್ ಒಂದು ಸಾಧಾರಣ ಬಡ ಕುಟುಂಬಕ್ಕೆ ಸೇರಿದಾತ. ಸ್ವಂತ ಮನೆಯಿಲ್ಲ, ಬಾಡಿಗೆ ಮನೆಯಲ್ಲಿ ವಾಸ. ಅಧ್ಯಯನಕ್ಕಾಗಿ ಆತ ತನ್ನ ತ್ರಿಚಕ್ರ ವಾಹನದಲ್ಲಿ ಪ್ರತಿನಿತ್ಯ 4 ಕಿ.ಮೀ. ದೂರ ಸಾಗಬೇಕು. ತಂದೆ–ತಾಯಿಗಳು ಕೂಡ ಹೆಚ್ಚು ವಿದ್ಯಾವಂತರಲ್ಲ. ಅತೀ ದುಬಾರಿಯ ಐಐಟಿ ಕೋಚಿಂಗ್ ಹಣ ಕೊಡುವ ಸಾಮರ್ಥ್ಯ ಅವರಲ್ಲಿಲ್ಲ. ಹಾಗಿದ್ದರೂ ಆತನ ಈ ಸಾಧನೆ ಎಲ್ಲರ ಹುಬ್ಬೇರಿಸುವಂತೆ ಮಾಡಿದೆ.

ಪತ್ವಾಟೋಲಿಯ ವಿದ್ಯಾರ್ಥಿಗಳು ಹೀಗೆ ಇಷ್ಟೊಂದು ಸಂಖ್ಯೆಯಲ್ಲಿ ಐಐಟಿ ಪರೀಕ್ಷೆಯಲ್ಲಿ ಯಶಸ್ವಿಯಾಗಲು ಕಾರಣ – ಸಾಮೂಹಿಕ ಅಧ್ಯಯನ. ಎಲ್ಲರೂ ಒಟ್ಟಿಗೆ ಕುಳಿತು ಓದುತ್ತಾರೆ. ಒಬ್ಬರಿಗೆ ಅರ್ಥವಾಗದುದನ್ನು ಇನ್ನೊಬ್ಬರ ಬಳಿ ಚರ್ಚಿಸಿ ಪರಿಹಾರ ಪಡೆಯುತ್ತಾರೆ. ಒಟ್ಟಿಗೆ ಸೇರಿ ಓದುವುದರಿಂದ ದುಬಾರಿ ಕೋಚಿಂಗ್ ಸಮಸ್ಯೆಯೂ ಬಗೆಹರಿದಿದೆ. ಪತ್ವಾಟೋಲಿಯ ಐಐಟಿ ಯಶೋಗಾಥೆ ಆರಂಭವಾಗಿದ್ದು 1996ರಲ್ಲಿ. ಐಐಟಿಯಲ್ಲಿ ತೇರ್ಗಡೆಯಾದ ಈ ಗ್ರಾಮದ ನೂರಾರು ಪದವೀಧರರು ಭಾರತ ಹಾಗೂ ಹೊರದೇಶಗಳಲ್ಲಿ ಉನ್ನತ ಹುದ್ದೆಗೆ ಸೇರಿದ್ದಾರೆ.

**ಸಂಪಾದಕೀಯ ಸಹಕಾರ** ಸತ್ಯನಾರಾಯಣ ಶಾನಭಾಗ್, ಶ್ರೀವತ್ಸ, ಸುಮಂತ್ ನೆಮ್ಮಾರ್, ರಾಧಾಕೃಷ್ಣ ಹೊಳ್ಳ, ರಾಜೇಶ್ ಪದ್ಮಾರ್, ಮೊಳಹಳ್ಳಿ ಅನಿಲ್‌ಕುಮಾರ್

## ಸಾಲುದ್ದದ ಸುದ್ದಿಗಳು

- **ನಶಾಮುಕ್ತ ಭಾರತಕ್ಕಾಗಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಜಮ್ಮು-ಕಾಶ್ಮೀರದಲ್ಲಿ ರ‍್ಯಾಲಿಯೊಂದನ್ನು ಏರ್ಪಡಿಸಿದೆ. ಜಮ್ಮುವಿನ ರಾಮಬನ್ ಸರ್ಕಾರಿ ಪ್ರೌಢಶಾಲೆ ಮೈದಾನದಿಂದ ಮುಖ್ಯ ಮಾರುಕಟ್ಟೆ, ಕೋರ್ಟ್ ರಸ್ತೆ, ಬಸ್ ನಿಲ್ದಾಣದ ಮೂಲಕ ಹಾದುಹೋದ ಈ ರ‍್ಯಾಲಿಯಲ್ಲಿ ವಿದ್ಯಾರ್ಥಿನಿಯರು ಸೇರಿದಂತೆ ಒಂದು ಸಾವಿರಕ್ಕೂ ಅಧಿಕ ಮಂದಿ ಭಾಗವಹಿಸಿದ್ದರು.**

- ತಂತ್ರಜ್ಞಾನವನ್ನು ಮಾಧ್ಯಮವಾಗಿರಿಸಿಕೊಂಡು ಎಲ್ಲ ನಾಗರಿಕರಿಗೂ ಸರ್ಕಾರಿ ಸೇವೆಗಳನ್ನು ತಲುಪಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಜಾರಿಗೆ ತರುತ್ತಿರುವ ಮಹತ್ವಾಕಾಂಕ್ಷೆಯ 'ಡಿಜಿಟಲ್ ಇಂಡಿಯಾ' ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಜುಲೈ 1ರಂದು ಚಾಲನೆ ನೀಡಿದರು. 18 ಲಕ್ಷ ಜನರಿಗೆ ಉದ್ಯೋಗಾವಕಾಶ ಒದಗಿಸುವ ಈ ಯೋಜನೆಗೆ 4.50 ಲಕ್ಷ ಕೋಟಿ ರೂ. ಬಂಡವಾಳ ಹೂಡಿಕೆಯಾಗುವ ನಿರೀಕ್ಷೆಯಿದೆ ಎನ್ನಲಾಗಿದೆ. ಈ ಯೋಜನೆಯಡಿ 2.4 ಲಕ್ಷ ಹಳ್ಳಿಗಳಿಗೆ ಬ್ರಾಡ್‌ಬ್ಯಾಂಡ್ ಸೌಲಭ್ಯ ಹಾಗೂ 4 ಲಕ್ಷ ಸಾರ್ವಜನಿಕ ಇಂಟರ್‌ನೆಟ್ ಬಳಕೆ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದು ಸರ್ಕಾರ ತಿಳಿಸಿದೆ.

- **ದೇಶದ ಸ್ವಚ್ಛತೆ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸುವ ಚಿಂದಿ ಆಯುವವರ ಸೇವೆಯನ್ನು ಪರಿಗಣಿಸಿ ರಾಷ್ಟ್ರೀಯ ಪ್ರಶಸ್ತಿ ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಭಾರತದಲ್ಲಿ ಚಿಂದಿ ಆಯುವವರು ಲಕ್ಷಾಂತರ ಸಂಖ್ಯೆಯಲ್ಲಿದ್ದು, ದೇಶವನ್ನು ತ್ಯಾಜ್ಯ ಮುಕ್ತಗೊಳಿಸುವ ನಿಟ್ಟಿನಲ್ಲಿ ಇವರು ಉತ್ತಮ ಕೆಲಸ ಮಾಡುತ್ತಿದ್ದಾರೆ. ಅವರ ಶ್ರಮವನ್ನು ಗುರುತಿಸಿ ಗೌರವಿಸುವ ಅಗತ್ಯವಿದೆ. ಹೀಗಾಗಿ ಚಿಂದಿ ಆಯುವ ಮೂವರು ಹಾಗೂ ಸಂಸ್ಥೆಗಳನ್ನು ಗುರುತಿಸಿ 1.5 ಲಕ್ಷದ ನಗದು ಬಹುಮಾನ ನೀಡಲಾಗುವುದು ಎಂದು ಕೇಂದ್ರ ಪರಿಸರ ಸಚಿವ ಪ್ರಕಾಶ್ ಜಾವಡೇಕರ್ ತಿಳಿಸಿದ್ದಾರೆ. ಪರಿಸರ ಮತ್ತು ಅರಣ್ಯಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಜನರಿಗೆ ಮಾಹಿತಿ ನೀಡಲು ಅಂತರ್ಜಾಲ ಪರಿಸರ ವಾಹಿನಿಯೊಂದನ್ನು ಆರಂಭಿಸುವ ಮತ್ತು ದೂರದರ್ಶನ ಕಿಸಾನ್ (ರೈತ) ವಾಹಿನಿಯಲ್ಲಿ ಪರಿಸರಕ್ಕೆ ಸಂಬಂಧಿಸಿದಂತೆ ಒಂದು ಗಂಟೆಯ ಕಾರ್ಯಕ್ರಮ ನೀಡಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ.**



- **ಈ ಬಾರಿಯ ಯುಪಿಎಸ್‌ಸಿ ಪರೀಕ್ಷೆಯಲ್ಲಿ 146ನೇ ರ‍್ಯಾಂಕ್ ಗಳಿಸಿರುವ ಲಕ್ನೋದ ನಿಹಾರಿಕಾ ಭಟ್ ಅಮೆರಿಕದಲ್ಲಿ ದೊರೆತಿದ್ದ ಉದ್ಯೋಗ ತೊರೆದು ತಾಯ್ನಾಡಿನ ಅಭಿವೃದ್ಧಿಗೆ ಸೇವೆ ಸಲ್ಲಿಸಲು ಭಾರತಕ್ಕೆ ಹಿಂತಿರುಗಲು ನಿರ್ಧರಿಸಿದ್ದಾರೆ. ಅಮೆರಿಕದ ಆಹಾರ ಮತ್ತು ತಂತ್ರಜ್ಞಾನ ವಿಭಾಗದಲ್ಲಿ ಸಂಶೋಧಕರಾಗಿ ಕಾರ್ಯನಿರ್ವಹಿಸುತ್ತಿದ್ದ ನಿಹಾರಿಕ ಈಗ ಭಾರತದಲ್ಲಿ ನಾಗರಿಕ ಸೇವೆ ಸಲ್ಲಿಸಲು ನಿರ್ಧರಿಸಿದ್ದಾರೆ.**



- **ದೇಶಾದ್ಯಂತ ಎಲ್ಲ ಕೃಷಿ ಭೂಮಿಗಳಿಗೂ ನೀರಾವರಿ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ 'ಪ್ರಧಾನಮಂತ್ರಿ ಕೃಷಿ ಸಿಂಚಯಿ ಯೋಜನೆ' ಆರಂಭಿಸಲು ಕೇಂದ್ರ ಸರ್ಕಾರ ನಿರ್ಧರಿಸಿದ್ದು, ಇದಕ್ಕೆ ಈಗಾಗಲೇ ಸಚಿವ ಸಂಪುಟ ಅನುಮೋದನೆ ನೀಡಿದೆ. ದೇಶದಲ್ಲಿ 142 ಮಿಲಿಯನ್ ಹೆಕ್ಟೇರ್ ಕೃಷಿ ಭೂಮಿಯಿದ್ದು ಇದರಲ್ಲಿ ಶೇ. 65ರಷ್ಟು ಕೃಷಿ ಮಳೆಯನ್ನೇ ಆಧರಿಸಿದೆ. ಮುಂಗಾರು ಮಳೆ ಸ್ವಲ್ಪ ಕೊರತೆಯಾದರೂ ರೈತರಿಗೆ ನಷ್ಟವಾಗುತ್ತದೆ. ಇದಕ್ಕೆ ಪರಿಹಾರ ಕಂಡುಕೊಳ್ಳುವ ಸಲುವಾಗಿ ಕೇಂದ್ರ ಸರ್ಕಾರ ಈ ಯೋಜನೆ ರೂಪಿಸಿದೆ. ಇದಕ್ಕಾಗಿ 1000 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ.**

- ಸುಗಮ ಸಂಚಾರ ಹಾಗೂ ವಾಹನ ಸವಾರರ ಮೇಲಿನ ಹೊರೆ ಕಡಿಮೆ ಮಾಡುವ ನಿಟ್ಟಿನಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ 200 ಟೋಲ್‌ಬೂತ್‌ಗಳನ್ನು ಕೇಂದ್ರ ಸರ್ಕಾರ ರದ್ದುಪಡಿಸಿದೆ.

- 2017ರ ವೇಳೆಗೆ ಭಾರತವನ್ನು ಸಂಪೂರ್ಣ ಸಾಕ್ಷರತಾ ರಾಷ್ಟ್ರವನ್ನಾಗಿ ಮಾಡುವ ಉದ್ದೇಶದಿಂದ ಆಗಸ್ಟ್ 23 ರಂದು 'ಸಾಕ್ಷರ ಭಾರತ ಅಭಿಯಾನ'ದ ಮೂಲಕ ಹೊಸ ದಾಖಲೆ ಬರೆಯಲು ಕೇಂದ್ರ ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ ಸಚಿವಾಲಯ ಸಿದ್ಧತೆ ನಡೆಸುತ್ತಿದೆ. ಅಗಸ್ಟ್ 23ರಂದು ಬೆಳಗ್ಗೆ 1 ರಿಂದ 5 ಗಂಟೆಯ ವರೆಗೂ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷಾರ್ಥಿಗಳು ಯಾವುದೇ ಸಮಯದಲ್ಲಿ ಪರೀಕ್ಷಾ ಕೇಂದ್ರಕ್ಕೆ ಆಗಮಿಸಿ ಪರೀಕ್ಷೆ ಬರೆಯಬಹುದಾಗಿದೆ. ಮೂರು ಗಂಟೆಗಳ ಕಾಲಾವಧಿಯ ಈ ಪರೀಕ್ಷೆಯಲ್ಲಿ ಅಕ್ಷರ ಮತ್ತು ಶಬ್ದ ಗುರುತಿಸುವುದು ಮತ್ತು ಗಣಿತದ ಸಣ್ಣಪುಟ್ಟ ಸಮಸ್ಯೆಗಳನ್ನು ಬಿಡಿಸುವ ಪ್ರಶ್ನೆಗಳನ್ನು ಕೇಳಲಾಗುವುದು ಎಂದು ಸಚಿವಾಲಯ ತಿಳಿಸಿದೆ. ದೇಶದಲ್ಲಿ 2010ರಲ್ಲಿ ಆರಂಭವಾದ ಸಾಕ್ಷರತಾ ಅಭಿಯಾನದಲ್ಲಿ 1.40 ಕೋಟಿ ಜನರು ಶಿಕ್ಷಣ ಪಡೆದಿದ್ದು ಆಗಸ್ಟ್‌ನಲ್ಲಿ ನಡೆಯಲಿರುವ ಪರೀಕ್ಷೆಯಲ್ಲಿ ಒಂದೇ ದಿನ 1.40 ಕೋಟಿ ಜನರು ಭಾಗವಹಿಸುವ ನಿರೀಕ್ಷೆಯಿದೆ.

- ಭಾರತದಲ್ಲಿ ಬೆಳೆಯಲಾಗುತ್ತಿರುವ ಭತ್ತದ ಮೂಲ ಚೀನಾ ಎಂಬ ಹಲವು ವರ್ಷಗಳ ನಂಬಿಕೆಯನ್ನು ಅಲ್ಲಗಳೆಯುವ ವಾದವನ್ನು ಭಾರತೀಯ ವಿಜ್ಞಾನಿಗಳು ಮಂಡಿಸಿದ್ದಾರೆ. ನವದೆಹಲಿಯ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ (ಐಎಆರ್‌ಐ) ವಿಜ್ಞಾನಿ ನಾಗೇಂದ್ರಕುಮಾರ್ ಸಿಂಗ್ ನೇತೃತ್ವದಲ್ಲಿ ನಡೆಸಿರುವ ಸಂಶೋಧನೆಯಿಂದ ದೇಶದಲ್ಲಿ ಬೆಳೆಯಲಾಗುತ್ತಿರುವ ಭತ್ತದ ಮೂಲ ಭಾರತವೇ ಎಂಬುದು ಸ್ಪಷ್ಟವಾಗಿದೆ.



- **ಸಿಆರ್‌ಪಿಎಫ್, ಸಿಐಎಸ್‌ಎಫ್, ಬಿಎಸ್‌ಎಫ್ ಸೇರಿದಂತೆ ಒಟ್ಟು 7 ಅರೆಸೇನಾಪಡೆಗಳಿಗೆ ಯೋಗವನ್ನು ಕಡ್ಡಾಯಗೊಳಿಸಲಾಗಿದೆ. ಈ ಮೂಲಕ 10 ಲಕ್ಷ ಸಿಬ್ಬಂದಿ ಇರುವ ಈ ಕೇಂದ್ರ ಸಶಸ್ತ್ರ ಪಡೆಯ ಪೊಲೀಸರು ಪ್ರತಿನಿತ್ಯ ದೈಹಿಕ ವ್ಯಾಯಾಮದದಲ್ಲಿ ಯೋಗಶಿಕ್ಷಣವನ್ನು ಪಡೆಯಲಿದ್ದಾರೆ. ಯೋಗಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ರೈಲ್ವೆ ತರಬೇತಿ ಕೇಂದ್ರಗಳಲ್ಲಿಯೂ ಈಗಾಗಲೇ ಯೋಗವನ್ನು ಕಡ್ಡಾಯಗೊಳಿಸಲಾಗಿದೆ.**



- **ವಿಶ್ವದಲ್ಲಿಯೇ ಅತಿ ಹೆಚ್ಚು ಉದ್ಯೋಗಿಗಳನ್ನು ಹೊಂದಿರುವ ಸಂಸ್ಥೆಗಳ ಟಾಪ್-10 ಪಟ್ಟಿಯಲ್ಲಿ ಭಾರತದ ಸೇನೆ ಮತ್ತು ರೈಲ್ವೆ ಸ್ಥಾನ ಪಡೆದಿದೆ. ಕನ್ಯಾಕುಮಾರಿಯಿಂದ ಕಾಶ್ಮೀರದ ವರೆಗೆ ಭಾರತವನ್ನು ಬೆಸೆಯುವ ಭಾರತೀಯ ರೈಲ್ವೆಯು 14ಲಕ್ಷ ಜನರಿಗೆ ಉದ್ಯೋಗ ಕಲ್ಪಿಸಿ, 8ನೇ ಸ್ಥಾನದಲ್ಲಿದೆ. ಜೊತೆಗೆ 13 ಲಕ್ಷ ಮಂದಿ ನೌಕಕರನ್ನು ಹೊಂದಿರುವ ಭಾರತೀಯ ಸೇನೆಯು 9ನೇ ಸ್ಥಾನದಲ್ಲಿ ಗುರುತಿಸಿಕೊಂಡಿದೆ. ಭಾರತೀಯ ರೈಲ್ವೆ ಹಾಗೂ ಸೇನೆ ಒಟ್ಟು 27 ಲಕ್ಷ ಮಂದಿ ಜನರ ಅನ್ನದಾತ ಎನಿಸಿಕೊಂಡಿದೆ. 32 ಲಕ್ಷ ನೌಕರರನ್ನು ಸಲಹುತ್ತಿರುವ ಅಮೆರಿಕದ ರಕ್ಷಣಾ ಇಲಾಖೆಯು ಪಟ್ಟಿಯ ಮೊದಲ ಸ್ಥಾನ ಗಿಟ್ಟಿಸಿಕೊಂಡಿದೆ.**



- ಪವಿತ್ರ ಅಮರನಾಥ ಯಾತ್ರೆಯು ಜುಲೈ 2ರಂದು ಆರಂಭಗೊಂಡಿದ್ದು ಆಗಸ್ಟ್ 29ರಂದು ಮುಕ್ತಾಯಗೊಳ್ಳಲಿದೆ. ಒಟ್ಟು 59 ದಿನಗಳ ಈ ಯಾತ್ರೆಗೆ ಜಮ್ಮು-ಕಾಶ್ಮೀರ ಸರ್ಕಾರ ಸಕಲ ಸಿದ್ಧತೆಗಳನ್ನು ಮಾಡಿದೆ. ಜಮ್ಮು-ಕಾಶ್ಮೀರ ರಾಜ್ಯದ ರಾಜಧಾನಿ ಶ್ರೀನಗರದಿಂದ 138 ಕಿ.ಮೀ. ದೂರದಲ್ಲಿ ಅಮರನಾಥ ಗುಹೆಯಿದೆ. ಅಮರನಾಥ ಗುಹೆಯು 150 ಅಡಿ ಎತ್ತರ, 100 ಅಡಿ ಅಗಲವಿದ್ದು, ಒಳಗೆ ಸುಮಾರು 200 ಅಡಿಗಳಷ್ಟು ಉದ್ದವಿದೆ. ಈ ಗುಹೆಯ ಒಂದು ಮೂಲೆಯಲ್ಲಿ ಲಿಂಗಾಕಾರದಲ್ಲಿ ಹಿಮವು ಅಚ್ಛಾದಿತವಾಗಿರುತ್ತದೆ. ಇದೇ ಅಮರನಾಥದ ಪವಿತ್ರ ಹಿಮಲಿಂಗ.



- ದೇಶದ ಶೇ. 73ರಷ್ಟು ಜನಸಂಖ್ಯೆ ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿದೆ. ಇಂತಹ ಗ್ರಾಮೀಣ ಭಾರತದ ಮೂರರಲ್ಲಿ ಒಂದು ಕುಟುಂಬಕ್ಕೆ ಭೂಮಿಯೇ ಇಲ್ಲ. ಇವರು ಜೀವನೋಪಾಯಕ್ಕೆ ಕೂಲಿಯನ್ನೇ ನೆಚ್ಚಿಕೊಂಡಿದ್ದಾರೆ ಎಂಬ ಅಂಶ 8 ದಶಕಗಳ (1932ರ ನಂತರ) ಬಳಿಕ ಇದೇ ಮೊದಲ ಬಾರಿಗೆ ನಡೆದ ಸಾಮಾಜಿಕ, ಆರ್ಥಿಕ ಹಾಗೂ ಜಾತಿ ಗಣತಿ (ಎಸ್‌ಇಎಸ್‌ಎಸ್)ಯಿಂದ ಬಹಿರಂಗವಾಗಿದೆ. ಶೇ 23.52ರಷ್ಟು ಗ್ರಾಮೀಣ ಕುಟುಂಬಗಳ 25 ವರ್ಷ ಮೇಲ್ಪಟ್ಟವರಲ್ಲಿ ಓದು ಬರಹ ಕಲಿತವರೇ ಇಲ್ಲ ಎಂಬ ಆತಂಕಕಾರಿ ಅಂಶ ಗಣತಿಯಿಂದ ತಿಳಿದುಬಂದಿದೆ. ಕರ್ನಾಟದ ಹಳ್ಳಿಗಾಡಿನ ಜನರ ಸ್ಥಿತಿ ಅತ್ಯಂತ ಶೋಚನೀಯವಾಗಿದ್ದು, ಶೇ. 69ರಷ್ಟು ಕುಟುಂಬಗಳ ಮಾಸಿಕ ಆದಾಯ 5000 ಅಥವಾ ಅದಕ್ಕಿಂತಲೂ ಕಡಿಮೆ. 80.48ಲಕ್ಷ ಗ್ರಾಮೀಣ ಕುಟುಂಬಗಳಲ್ಲಿ 35.03 ಲಕ್ಷ ಕುಟುಂಬಗಳು (ಶೇ. 44.65) ಬೇಸಾಯ ಮಾಡುತ್ತಿವೆ. 26.14 ಲಕ್ಷ ಕುಟುಂಬಗಳು (ಶೇ 32.49) ಕೂಲಿ ಕೆಲಸ ನೆಚ್ಚಿಕೊಂಡಿವೆ ಎಂದು ಅದು ತಿಳಿಸಿದೆ. ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಆಶ್ರಯದಲ್ಲಿ ದೇಶದ 640 ಜಿಲ್ಲೆಗಳಲ್ಲಿ ಸರ್ವೇ ನಡೆಸಿ ಈ ವರದಿ ಸಿದ್ಧಪಡಿಸಲಾಗಿದೆ.

- **ಶತಮಾನದಷ್ಟು ಹಳೆಯ ಕಾಲೇಜುಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯುಜಿಸಿ) ದೇಶದ 19 ಕಾಲೇಜುಗಳಿಗೆ ಪಾರಂಪರಿಕ ಸ್ಥಾನಮಾನ ನೀಡಿದ್ದು, ಅದರಲ್ಲಿ ಮಂಗಳೂರು ಯೂನಿವರ್ಸಿಟಿ ಕಾಲೇಜು ಕೂಡ ಸೇರಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಮಾತ್ರವಿದ್ದ ಸಂದರ್ಭದಲ್ಲಿ ಕೆಲವು ಶಿಕ್ಷಣ ಪ್ರೇಮಿಗಳು ಹಣ ಒಟ್ಟುಗೂಡಿಸಿ ಸಾರ್ವಜನಿಕ ಶಿಕ್ಷಣ ಸಂಸ್ಥೆಯೊಂದನ್ನು ಆರಂಭಿಸುವಂತೆ ಸರ್ಕಾರವನ್ನು ಕೇಳಿಕೊಂಡರು. ಪರಿಣಾಮ ಬಲ್ಮಠದಲ್ಲಿ 1865ರಲ್ಲಿ 1ರಿಂದ 10ನೇ ತರಗತಿ ವರೆಗಿನ ಪ್ರಾಂತೀಯ ಶಾಲೆ ಆರಂಭಗೊಂಡಿತು. ಪಂಜೆ ಮಂಗೇಶರಾಯರು, ಮಂಜೇಶ್ವರ ಗೋವಿಂದ ಪೈ, ಕೋಟ ಶಿವರಾಮ ಕಾರಂತ, ಬೆನಗಲ್ ರಾಮರಾಯ, ಕಮಲಾದೇವಿ ಚಟ್ಟೋಪಾಧ್ಯಾಯ ಮುಂತಾದವರು ಮಂಗಳೂರು ಯೂನಿವರ್ಸಿಟಿ ಕಾಲೇಜಿನ ಹಳೆ ವಿದ್ಯಾರ್ಥಿಗಳು.**

ಪ್ರತಿ ವರ್ಷ ಈ ಗ್ರಾಮದಿಂದ ಕನಿಷ್ಠ 10 ರಿಂದ 15 ವಿದ್ಯಾರ್ಥಿಗಳು ಐಐಟಿಗೆ ಆಯ್ಕೆಯಾಗುತ್ತಿದ್ದಾರೆ. ಐಐಟಿ ಮತ್ತು ಎನ್‌ಐಟಿ ಪರೀಕ್ಷೆಗಳಿಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳಿಗೆ ಈಗಾಗಲೇ ಐಐಟಿ ಮುಗಿಸಿ ಉದ್ಯೋಗದಲ್ಲಿರುವ ಇದೇ ಗ್ರಾಮದ ವ್ಯಕ್ತಿಗಳು ಪರೀಕ್ಷೆ ತಯಾರಿಯಲ್ಲಿ ಸಹಕರಿಸುತ್ತಿರುವುದು ಇನ್ನೊಂದು ವಿಶೇಷ. ಈ ಗ್ರಾಮದಲ್ಲಿರುವವರು ಶ್ರೀಮಂತರೇನೂ ಅಲ್ಲ. ನಗರದಲ್ಲಿರುವಂತೆ ಯಾವ ಬಗೆಯ ಅನುಕೂಲತೆಗಳೂ ಇಲ್ಲಿಲ್ಲ. ಹೆಚ್ಚಿನವರು ಹಿಂದುಳಿದ ವರ್ಗಕ್ಕೆ ಸೇರಿದ ಬಡ ನೇಕಾರರು. ಕೆಲವರಂತೂ ಕೇವಲ ಅಕ್ಷರಜ್ಞಾನ ಮಾತ್ರ ಹೊಂದಿದವರು. ಹಲವರಿಗೆ ಐಐಟಿ ಎಂದರೆ ಏನೆಂದೇ ಗೊತ್ತಿಲ್ಲ. ಆದರೆ ತಮ್ಮ ಮಕ್ಕಳು ಏನೋ ಮಹತ್ವವಾದುದನ್ನು ಸಾಧಿಸುತ್ತಿದ್ದಾರೆ ಎಂಬುದನ್ನು ಮಾತ್ರ ಬಲ್ಲರು. ಈ ಗ್ರಾಮವನ್ನೀಗ "ಐಐಟಿ ಹಬ್" ಎಂದೇ ಗುರುತಿಸಲಾಗುತ್ತಿದೆ. ಐಐಟಿ ಮಾತ್ರವಲ್ಲದೆ, ವೈದ್ಯಕೀಯ, ಬ್ಯಾಂಕಿಂಗ್, ಮ್ಯಾನೇಜ್‌ಮೆಂಟ್ ಕೋರ್ಸ್‌ಗಳಿಗೆ ಸಂಬಂಧಿಸಿದ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಈ ಗ್ರಾಮದ ವಿದ್ಯಾರ್ಥಿಗಳು ಹಾಜರಾಗುತ್ತಿದ್ದಾರೆ. ಮಾಧ್ಯಮಗಳಲ್ಲಿ ಯಾವುದೇ ಪ್ರಚಾರವಿಲ್ಲದೆ ಈ ಗ್ರಾಮ ಮೌನಕ್ರಾಂತಿಯತ್ತ ದಿಟ್ಟ ಹೆಜ್ಜೆ ಹಾಕುತ್ತಿದೆ. ಪತ್ವಾಟೋಲಿ ಗ್ರಾಮದಲ್ಲಿ ಕಳೆದ 5 ದಶಕಗಳಿಂದ ಆರೆಸ್ಸೆಸ್‌ನ ಶಾಖೆ ನಿಯಮಿತವಾಗಿ ನಡೆಯುತ್ತಿದೆ.

## ಉತ್ತಿಷ್ಠ ಭಾರತದಿಂದ ಸೀಡ್‌ಬಾಲ್ ತಯಾರಿ



ಪರಿಸರ ಕಾಳಜಿ ಹೊಂದಿರುವ 'ಉತ್ತಿಷ್ಠ ಭಾರತ' ಎಂಬ ಯುವಕರ ಪಡೆಯೊಂದು ಸಸ್ಯಗಳನ್ನು ಬೆಳೆಸುವ ವಿನೂತನ ಸಾಹಸಕ್ಕಿಳಿದಿದೆ. ಭಾರತೀಯ ಕಿಸಾನ್ ಸಂಘದ ಮಾರ್ಗದರ್ಶನದಲ್ಲಿ 'ಸೀಡ್‌ಬಾಲ್ ತಯಾರಿಸುವ ಹಾಗೂ ಗಿಡ ನೆಡುವ ಕಾರ್ಯದಲ್ಲಿ ಉತ್ತಿಷ್ಠ ಭಾರತ ತಂಡ ತೊಡಗಿಕೊಂಡಿದೆ. ಇತ್ತೀಚೆಗೆ ಉತ್ತಿಷ್ಠ ಭಾರತ ಸಂಘಟನೆ ಯುವಕರು 5 ಸಾವಿರ 'ಸೀಡ್‌ಬಾಲ್'ಗಳ ತಯಾರಿಕೆಯಲ್ಲಿ ತಮ್ಮ ಒಂದು ಭಾನುವಾರವನ್ನು ಸಂಪೂರ್ಣವಾಗಿ ವಿನಿಯೋಗಿಸಿದ್ದಾರೆ. ಜೊತೆಗೆ 50ಕ್ಕೂ ಹೆಚ್ಚು ಗಿಡಗಳನ್ನು ನೆಟ್ಟಿದ್ದಾರೆ. 'ಸೀಡ್‌ಬಾಲ್' ಗಿಡಬೆಳೆಸುವ ಒಂದು ವಿಶಿಷ್ಟ ಸರಳ ವಿಧಾನ. ಮಣ್ಣಿನೊಂದಿಗೆ ದನದ ಸಗಣಿಯನ್ನು ಬೆರೆಸಿ ಉಂಡೆಕಟ್ಟುವ ಮಟ್ಟಿಗೆ ಹದಮಾಡಿಕೊಳ್ಳುವುದು. ಬೀಜಗಳನ್ನು ಹಾಕಿ ಮಣ್ಣಿನ ಉಂಡೆ (ಸೀಡ್ ಬಾಲ್)ಗಳನ್ನು ಕಟ್ಟಿ ನೆರಳಿನಲ್ಲಿ ಒಣಗಿಸಿ ಮಳೆಗಾಲದ ಸಂದರ್ಭದಲ್ಲಿ ಖಾಲಿಜಾಗದಲ್ಲಿ ಬಿಸಾಡುವುದು. ತೇವಾಂಶ ಸಿಕ್ಕಾಗ ಬೀಜವು ಮೊಳಕೆಯೊಡೆದು ಅಲ್ಲೇ ಬೇರು ಬಿಟ್ಟು ಗಿಡವಾಗುವುದು. ಇಂತಹ ಅನೇಕ ಯಶಸ್ವಿ ಪ್ರಯೋಗಗಳನ್ನು ನೆಲಮಂಗಲ, ಕೋಲಾರ, ರಾಮನಗರ, ದೊಡ್ಡಬಳ್ಳಾಪುರಗಳಲ್ಲಿ ಭಾರತೀಯ ಕಿಸಾನ್ ಸಂಘದ ಮಾರ್ಗದರ್ಶನದಲ್ಲಿ ನಡೆದಿವೆ.

पुंगव PUNGAVA
# 74, Ranga Rao Road,
Shankarapuram, Bangalore - 560 004.
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
15-7-2015



संस्कृत

## ಸಂಸ್ಕೃತ ಭಾರತಿ: ಪೂರ್ಣಾವಧಿ ಕಾರ್ಯಕರ್ತರಾಗಲು ಅರ್ಜಿ ಅಹ್ವಾನ

ಸಂಸ್ಕೃತ ಭಾಷೆ ಕಲಿಕೆ ಹಾಗೂ ಶಿಕ್ಷಕರಾಗುವ ಮೂಲಕ ಸಂಸ್ಕೃತ ಭಾರತಿ ಸಂಸ್ಥೆಯ ಪೂರ್ಣಾವಧಿ ಕಾರ್ಯಕರ್ತರಾಗಲು ಆಸಕ್ತರಿಂದ ಅರ್ಜಿ ಅಹ್ವಾನಿಸಲಾಗಿದೆ.

ವಿಶ್ವದ ಹಲವು ದೇಶಗಳಲ್ಲಿ ತನ್ನ ಪ್ರಾಬಲ್ಯವನ್ನು ವೃದ್ಧಿಸಿಕೊಳ್ಳುತ್ತಿರುವ ಸಂಸ್ಕೃತ ಭಾಷೆಯನ್ನು ಕಲಿಸಿಕೊಡುವವರಿಗೆ ಸಾಕಷ್ಟು ಬೇಡಿಕೆ ಇದೆ. ಭಾರತದಲ್ಲಿ ಸಾಕಷ್ಟು ಕಡೆಗಳಲ್ಲಿ ಸಂಸ್ಕೃತ ಕಲಿಸುವ ಅವಕಾಶವಿದೆ. 18 ರಿಂದ 60ರ ವಯೋಮಾನದ ಆಸಕ್ತರಿಗಾಗಿ ಸಂಸ್ಕೃತ ಭಾರತಿ ಆಗಸ್ಟ್‌ನಲ್ಲಿ ವಿಶೇಷ ತರಬೇತಿ ಶಿಬಿರ ಆಯೋಜಿಸಿದೆ.

ಎಸ್‌ಎಸ್‌ಎಲ್‌ಸಿ, ಬಿಕಾಂ, ಬಿಎಸ್ಸಿ ಸೇರಿ ಯಾವುದೇ ಸಾಮಾನ್ಯ ಶಿಕ್ಷಣ ಹಾಗೂ ಸಂಸ್ಕೃತ ಪದವಿ, ವಿದ್ವತ್ ಪಡೆದ ಪುರುಷ, ಮಹಿಳೆಯರು ಭಾಗವಹಿಸಬಹುದು. ತರಬೇತಿ ನಂತರ ವಿವಿಧೆಡೆ ಸಂಸ್ಕೃತ ಪ್ರಸಾರಕ್ಕಾಗಿ ಸಂಸ್ಥೆಯ ಪೂರ್ಣಾವಧಿ ಕಾರ್ಯಕರ್ತರಾಗಿ ಕಾರ್ಯನಿರ್ವಹಿಸಬಹುದು.

ಸೇವಾ ನಿವೃತ್ತರು, ಕೃಷಿಕರು ಭಾಗವಹಿಸಿ ತಮ್ಮ ಮನೆಯನ್ನೇ ಕೇಂದ್ರವಾಗಿಸಿ ಚಟುವಟಿಕೆಗಳನ್ನು ಆರಂಭಿಸಬಹುದು. ಆಸಕ್ತರು ಹೆಸರು, ವಿಳಾಸ, ವಯಸ್ಸು, ವಿದ್ಯಾರ್ಹತೆ ವಿವರಗಳೊಂದಿಗೆ ಭಾವಚಿತ್ರ ಲಗತ್ತಿಸಿರುವ ಅರ್ಜಿಯನ್ನು ಜುಲೈ 20ರೊಳಗೆ ಕಳುಹಿಸಿಕೊಡಬೇಕು.

ವಿಳಾಸ:
ಸಂಸ್ಕೃತ ಭಾರತಿ
ಅಕ್ಷರಂ, 8ನೇ ಅಡ್ಡರಸ್ತೆ, 2ನೇ ಹಂತ, ಗಿರಿನಗರ
ಬೆಂಗಳೂರು – 560 085
ಇ–ಮೇಲ್: chidsamskritam@gmail.com
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
8050250829/9449851529/08026722576

## ಬಾಂಗ್ಲಾ ಗಡಿ: ಗೋ ರಕ್ಷಣೆಗೆ ಮುಂದಾದ ಕೇಂದ್ರ ಸರ್ಕಾರ



ಬಾಂಗ್ಲಾದೇಶಕ್ಕೆ ಸಾಗಿಸಲಾಗುತ್ತಿರುವ ಗೋವುಗಳ ರಕ್ಷಣೆಗೆ ಮುಂದಾಗಿರುವ ಕೇಂದ್ರ ಸರ್ಕಾರ ದಿಟ್ಟ ಕ್ರಮಗಳನ್ನು ತೆಗೆದುಕೊಂಡಿದೆ. ಗಡಿಭಾಗದಲ್ಲಿ ನಿಯೋಜಿಸಲ್ಪಟ್ಟಿರುವ ಸುಮಾರು 30 ಸಾವಿರ ಸೈನಿಕರು ಅಕ್ರಮ ಗೋ ಸಾಗಣೆಯನ್ನು ತಡೆಯಲು ಕಾರ್ಯಾಚರಿಸುತ್ತಿದ್ದಾರೆ. ಇದುವರೆಗೆ 90 ಸಾವಿರ ಜಾನುವಾರುಗಳನ್ನು ರಕ್ಷಿಸಿರುವ ಬಿಎಸ್‌ಎಫ್ ಯೋಧರು, 400 ಗೋಕಳ್ಳರನ್ನು ಬಂಧಿಸಿದ್ದಾರೆ. ಪ್ರತಿವರ್ಷ ಭಾರತದಿಂದ ಕನಿಷ್ಠ 20 ಲಕ್ಷ ಹಸುಗಳು ಬಾಂಗ್ಲಾಕ್ಕೆ ಕಳ್ಳಸಾಗಣೆ ಆಗುತ್ತಿದ್ದು, ಇದರಿಂದ ವರ್ಷಕ್ಕೆ 3,805 ಕೋಟಿ ರೂ. ವಹಿವಾಟು ನಡೆಯುತ್ತಿದೆ. ಈ ಎಲ್ಲ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿರುವ ಕೇಂದ್ರ ಸರ್ಕಾರ ಗಡಿಯಲ್ಲಿ ಸೇನಾ ಕಣ್ಗಾವಲಿಡುವ ನಿರ್ಧಾರ ಕೈಗೊಂಡಿದೆ. ವರ್ಷದ ಹಿಂದೆ ಗಡಿಭಾಗದಲ್ಲಿ ಸಂಚರಿಸಿ ಪರಿಸ್ಥಿತಿ ಪರಾಮರ್ಶಿಸಿದ್ದ ಕೇಂದ್ರ ಗೃಹ ಸಚಿವ ರಾಜ್‌ನಾಥ್ ಸಿಂಗ್, ಅಕ್ರಮ ಗೋಸಾಗಣೆ ತಡೆಯುವಂತೆ ಆದೇಶಿಸಿದ್ದರು. ಭಾರತ ಸರ್ಕಾರದ ಕಟ್ಟುನಿಟ್ಟಿನ ಕ್ರಮದಿಂದಾಗಿ ಬಾಂಗ್ಲಾದೇಶದ ಗೋಮಾಂಸ ಉದ್ಯಮ ಸಂಕಷ್ಟಕ್ಕೆ ಸಿಲುಕಿದೆ. ಕೆಲ ತಿಂಗಳಿಂದ ಬಾಂಗ್ಲಾದೇಶದಲ್ಲಿ ಗೋಮಾಂಸ ಬೆಲೆ ಶೇ.40ರಷ್ಟು ಏರಿಕೆಯಾಗಿದೆ.

## ಬ್ಯಾಂಕಾಕ್‌ನಲ್ಲಿ 16ನೇ ವಿಶ್ವ ಸಂಸ್ಕೃತ ಸಮ್ಮೇಳನ; ಭಾಷಾ ಪ್ರಚಾರಕ್ಕೆ ಕರೆ

ಸಂಸ್ಕೃತದ ಭಾಷೆಯ ಪುನರುಜ್ಜೀವನಕ್ಕಾಗಿ ಮೂರು ವರ್ಷಗಳಿಗೊಮ್ಮೆ ವಿಶ್ವ ಸಂಸ್ಕೃತ ಶಿಬಿರಗಳು ನಡೆಯುತ್ತಿದ್ದು, 16ನೇ ವಿಶ್ವ ಸಂಸ್ಕೃತ ಸಮ್ಮೇಳನ ಜೂನ್ 28ರಿಂದ 5 ದಿನಗಳ ಕಾಲ ಬ್ಯಾಂಕಾಂಕ್‌ನಲ್ಲಿ ನಡೆಯಿತು. ಸಮ್ಮೇಳನದಲ್ಲಿ 60 ರಾಷ್ಟ್ರಗಳ 600ಕ್ಕೂ ಅಧಿಕ ಸಂಸ್ಕೃತ ಪಂಡಿತರು ಪಾಲ್ಗೊಂಡಿದ್ದರು. ಸಂಸ್ಕೃತವನ್ನು ಜನಪ್ರಿಯವಾಗಿಸಲು ಶ್ರಮಿಸುತ್ತಿರುವ 'ಸಂಸ್ಕೃತ ಭಾರತಿ'ಯ 30 ಪಂಡಿತರು ಸೇರಿದಂತೆ ಭಾರತದ 250 ಮಂದಿ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. 5 ದಿನಗಳ ಸಮ್ಮೇಳನದಲ್ಲಿ ಒಟ್ಟು 31 ಗೋಷ್ಠಿಗಳು ನಡೆದಿವೆ. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಭಾರತದ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್, 'ಸಂಸ್ಕೃತವು ಆಧುನಿಕ ಮತ್ತು ಸಾರ್ವತ್ರಿಕ ಭಾಷೆ. ಗಂಗಾ ನದಿಯಂತೆ ಪವಿತ್ರವಾದುದು' ಎಂದರು. ಸಂಸ್ಕೃತ ಭಾಷೆಯ ಪ್ರಚಾರ ಮತ್ತು ಬೆಳವಣಿಗೆಗೆ ಗಣನೀಯ ಸೇವೆ ಸಲ್ಲಿಸಿದವರನ್ನು ಗುರುತಿಸಿ ಪ್ರತಿವರ್ಷ ಅಂತಾರಾಷ್ಟ್ರೀಯ ಸಂಸ್ಕೃತ ಪ್ರಶಸ್ತಿ ನೀಡಿ ಗೌರವಿಸಲು ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಮಂಡಳಿ (ಐಸಿಸಿಆರ್) ನಿರ್ಧರಿಸಿದೆ. ಈ ಪ್ರಶಸ್ತಿಯು ಪ್ರಮಾಣಪತ್ರ ಹಾಗೂ 12.70 ಲಕ್ಷ (20 ಸಾವಿರ ಅಮೆರಿಕನ್ ಡಾಲರ್) ಬಹುಮಾನ ಮೊತ್ತವನ್ನು ಒಳಗೊಂಡಿರಲಿದೆ. ಸಂಸ್ಕೃತ ಭಾಷೆ ಅಥವಾ ಸಾಹಿತ್ಯದಲ್ಲಿ ಭಾರತದಲ್ಲಿ ಸಂಶೋಧನೆ ನಡೆಸಲು ಬಯಸುವ ಇಬ್ಬರು ವಿದೇಶಿ ಪಂಡಿತರಿಗೆ ಭಾರತ ಸರ್ಕಾರ ಐಸಿಸಿಆರ್ ಫೆಲೋಶಿಪ್ ನೀಡಲಿದೆ.

## ಮದರಸಾ ಶಾಲೆ ಅಲ್ಲ: ಮಹಾರಾಷ್ಟ್ರ ಸರ್ಕಾರದ ಆದೇಶ

ಮದರಸಾ ಸೇರಿದಂತೆ ಔಪಚಾರಿಕ ಶಿಕ್ಷಣ ನೀಡದ (ಇಂಗ್ಲಿಷ್, ಗಣಿತ ಮತ್ತು ವಿಜ್ಞಾನದಂಥ ಪ್ರಾಥಮಿಕ ವಿಷಯಗಳನ್ನು ಬೋಧಿಸದ) ಎಲ್ಲ ಸಂಸ್ಥೆಗಳನ್ನು 'ಶಾಲೆ' ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂದು ಮಹಾರಾಷ್ಟ್ರ ಸರ್ಕಾರ ಆದೇಶಿಸಿದೆ. ಧಾರ್ಮಿಕ ವಿಷಯಗಳ ಜೊತೆಗೆ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಔಪಚಾರಿಕ ಶಿಕ್ಷಣವನ್ನೂ ನೀಡಬೇಕು, ಇಲ್ಲದಿದ್ದರೆ ಅಂಥ ಮದರಸಾಗಳ ಮಾನ್ಯತೆ ರದ್ದು ಮಾಡಲಾಗುವುದು. ಎಂದು ಬಿಜೆಪಿ–ಶಿವಸೇನಾ ನೇತೃತ್ವದ ಮಹಾರಾಷ್ಟ್ರ ಸರ್ಕಾರ ಎಚ್ಚರಿಸಿದೆ.

ಸಂವಿಧಾನ ಪ್ರತಿ ಮಗುವಿಗೂ ಪ್ರಾಥಮಿಕ ಶಿಕ್ಷಣದ ಹಕ್ಕು ನೀಡಿದೆ. ಆದರೆ, ಕೇವಲ ಧಾರ್ಮಿಕ ವಿಷಯಗಳನ್ನು ಬೋಧಿಸುವ ಮದರಸಾಗಳು ಮಕ್ಕಳನ್ನು ಔಪಚಾರಿಕ ಶಿಕ್ಷಣದಿಂದ ವಂಚಿಸುತ್ತಿವೆ. ಹೀಗಾಗಿ ಮದರಸಾಗಳನ್ನು ಶಾಲೆಗಳು ಎಂದು ಪರಿಗಣಿಸಲು ಸಾಧ್ಯವಿಲ್ಲ. ಅಂತಹ ಮದರಸಾಗಳಲ್ಲಿ ಕಲಿಯುತ್ತಿರುವ ಮಕ್ಕಳನ್ನು 'ಶಾಲೆ ಹೊರಗಿನ ಮಕ್ಕಳು' ಎಂದು ಪರಿಗಣಿಸಲು ತೀರ್ಮಾನಿಸಲಾಗಿದೆ ಎಂದು ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಏಕನಾಥ್ ಖಡ್ಸೆ ಸರ್ಕಾರದ ವಾದವನ್ನು ಸಮರ್ಥಿಸಿಕೊಂಡಿದ್ದಾರೆ. ರಾಜ್ಯದಲ್ಲಿ 1,890 ನೋಂದಾಯಿತ ಮದರಸಾಗಳಿದ್ದು 1.5 ಲಕ್ಷ ಮಂದಿ ಅಭ್ಯಸಿಸುತ್ತಿದ್ದಾರೆ. ಈ ಮದರಸಾಗಳ ಪೈಕಿ 550 ಮದರಸಾಗಳು ಮಕ್ಕಳಿಗೆ ಎಲ್ಲ ವಿಷಯ ಬೋಧಿಸಲು ಒಪ್ಪಿವೆ. ಅಂಥ ಮದರಸಾಗಳಿಗೆ ಸರ್ಕಾರ ಎಲ್ಲ ರೀತಿಯ ಆರ್ಥಿಕ ನೆರವು, ಸೌಲಭ್ಯ ಮತ್ತು ಬೋಧಕ ಸಿಬ್ಬಂದಿಯನ್ನು ಒದಗಿಸಲು ಸರ್ಕಾರ ಸಿದ್ಧವಿದೆ ಎಂದು ಸರ್ಕಾರ ತಿಳಿಸಿದೆ. ಮಹಾರಾಷ್ಟ್ರ ಸರ್ಕಾರದ ಈ ಹಿಂದೆ ಗೋಹತ್ಯೆ ನಿಷೇಧಿಸುವ ದಿಟ್ಟ ಕ್ರಮ ಕೈಗೊಂಡಿತ್ತು. ಮಾತ್ರವಲ್ಲದೆ ಗೋಹತ್ಯೆಯನ್ನು ತಡೆಯಲು ಸೂಕ್ತಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ಸೂಚಿಸಿತ್ತು.





## ಯುವಾ ಬ್ರಿಗೇಡ್‌ನಿಂದ ಕಲ್ಯಾಣಿ ಕಲ್ಯಾಣ

ಜೀವಸಂಕುಲದ ಅಮೃತವಾದ ನೀರಿನ ಕೊರತೆ, ಬರಗಾಲ ಇಂದು ಸರ್ವೇಸಾಮಾನ್ಯವಾಗಿ ಎಲ್ಲೆಡೆ ಕೇಳಿಬರುವ ಸುದ್ದಿ. ಒಂದೆಡೆ ಬರಿದಾಗುತ್ತಿರುವ ಅಂತರ್ಜಲ, ಇನ್ನೊಂದೆಡೆ ಸಾವಿರಾರು ವರ್ಷಗಳಿಂದ ಇಡೀ ಊರಿಗೆ ನೀರುಣಿಸುತ್ತಿದ್ದ ನದಿಗಳು, ಕಲ್ಯಾಣಿಗಳಲ್ಲಿ ಇಂದು ಕೆಸರು ತುಂಬಿಕೊಂಡಿವೆ. ಇಂತಹ ಪಾಳುಬಿದ್ದ ಕಲ್ಯಾಣಿಗಳನ್ನು ಸ್ವಚ್ಛಗೊಳಿಸುವ ಅಭಿಯಾನವನ್ನು "ಯುವಾ ಬ್ರಿಗೇಡ್" ಎಂಬ ತರುಣರ ಗುಂಪು ಹಮ್ಮಿಕೊಂಡಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೂಲಿಬೆಲೆಯಲ್ಲಿ ಐದು ದಶಕಗಳಿಂದ ಮಾಯವಾಗಿದ್ದ ಕಲ್ಯಾಣಿಯನ್ನು ಗುರುತಿಸಿ, ಸ್ವಚ್ಛಗೊಳಿಸಿ ಮರುಸ್ವರೂಪ ನೀಡುವ ಮೂಲಕ ಪ್ರಾರಂಭವಾದ ಈ ಅಭಿಯಾನವು ಇಂದು ರಾಜ್ಯಾದ್ಯಂತ ವಿಸ್ತರಿಸಿದೆ. ಉತ್ತರ ಕರ್ನಾಟಕದ ಬಾಗಲಕೋಟೆ, ಕಲಬುರಗಿ, ಯಾದಗಿರಿ ಸೇರಿದಂತೆ ರಾಜ್ಯದ 38ಕ್ಕೂ ಅಧಿಕ ಕಲ್ಯಾಣಿಗಳ ಸ್ವಚ್ಛತೆ–ಜೀರ್ಣೋದ್ಧಾರ ಕಾರ್ಯ ಯುವಾ ಬ್ರಿಗೇಡ್ ನೇತೃತ್ವದಲ್ಲಿ ಈಗಾಗಲೇ ನಡೆದಿದೆ. ಈ ಕಾರ್ಯದಲ್ಲಿ ಸ್ಥಳೀಯ ಮಠಾಧೀಶರು ಸೇರಿದಂತೆ ಸಮಾಜಹಿತಚಿಂತಕರು ಕೈಜೋಡಿಸಿದ್ದಾರೆ.

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : 9731264009 ಪ್ರಸರಣ: 97391 83021 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19